ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 15 ಜೂನ್ 24, 1979 40 ಪೈಸೆ

ವೈದ್ಯರ ಹೋರಾಟ

ತಮ್ಮ ಬೇಡಿಕೆಗಳು ಈಡೇರದಿದ್ದಲ್ಲಿ ಜೂನ್ 25ರಿಂದ ಅನಿರ್ದಿಷ್ಟ ಮುಷ್ಕರ ನಡೆಸಲು ರಾಜ್ಯದ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿನ ಸುಮಾರು 5000 ವೈದ್ಯರುಗಳು ತೀರ್ಮಾನಿಸಿರುವರು. ಇವರ 10 ಅಂಶದ ಬೇಡಿಕೆಗಳಲ್ಲಿ ಒಂದು ಮುಖ್ಯವಾದುದು ವೈದ್ಯಕೀಯ ತರಬೇತಿ ಶಾಲೆಗಳಿಗೆ ಸಂಬಂಧಿಸಿದ ಆಸ್ಪತ್ರೆಗಳಲ್ಲಿ ಅಸಿಸ್ಟೆಂಟ್ ಸರ್ಜನ್ ಸ್ಥಾನಕ್ಕೆ ಬದಲಾಗಿ ಜೂನಿಯರ್ ರೆಸಿಡೆಂಟ್ ಅವರನ್ನು ನೇಮಕ ಮಾಡುವ ಸರಕಾರದ ಕ್ರಮವನ್ನು ಕೈಬಿಡಬೇಕು ಎಂಬುದಾಗಿದೆ. ಕೆಲಸದಲ್ಲಿ ಭಡ್ತಿ, ಉತ್ತಮ ಸೌಲಭ್ಯಗಳು, ಮತ್ತು ಇನ್ನೂ ಇತರ ಬೇಡಿಕೆಗಳು ಸೇರಿವೆ.

ಇದೇ ಸುಂದರ್ಭ ನಗರದಲ್ಲಿ ಎರಡು ಸರಕಾರಿ ಆಸ್ಪತ್ರೆಗಳಲ್ಲಿನ ಅಧ್ಯಾಪಕ-ವೈದ್ಯರುಗಳು ವೈದ್ಯಕೀಯ ಮಂಡಳಿಯ ಶಿಫಾರಸಿನಂತೆ ವೇತನ ದೊರೆಯಬೇಕೆಂದು ಮುಷ್ಕರವನ್ನು ಹೂಡಿದ್ದು. ಈ ಬೇಡಿಕೆಗಳಿಗೆ ವೈದ್ಯಕೀಯ ವಿದ್ಯಾರ್ಥಿಗಳ ಬೆಂಬಲವು ದೊರೆತಿದೆ. ಅಧ್ಯಾಪಕ-ವೈದ್ಯರುಗಳು ಮುಷ್ಕರಕ್ಕೆ ಬೆಂಬಲವಾಗಿ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಬಹಿಷ್ಕರಿಸಿರುವರು.

ಇದಕ್ಕೆ ಸ್ವಲ್ಪ ದಿನಗಳ ಮೊದಲು ಸರಕಾರಿ ಆಸ್ಪತ್ರೆಗಳಲ್ಲಿ ದುಡಿಯುವ ಜೂನಿಯರ್ ವೈದ್ಯರುಗಳು ಹೋರಾಟವನ್ನು ಮೊದಲು ಮಾಡಿದ್ದರು.

ಸಂಪಾದಕೀಯ

ಜೂನಿಯರ್ ವೈದ್ಯರುಗಳ ಬೇಡಿಕೆಗಳಲ್ಲಿ ರಾಜ್ಯದಲ್ಲಿ ನಿರುದ್ಯೋಗದಲ್ಲಿರುವ ಸುಮಾರು 5000 ಮಂದಿ ಎಂ. ಬಿ. ಬಿ. ಎಸ್. ಪದವೀಧರರಿಗೆ ಉದ್ಯೋಗ ದೊರಕಿಸಿಕೊಡಬೇಕು, ಇವರೆಲ್ಲರಿಗೆ ಉದ್ಯೋಗಾವಕಾಶ ಆಗುವ ತನಕ ಮತ್ತು ನಿರುದ್ಯೋಗ ನಿವಾರಣೆಗಾಗಿ ವೈದಕೀಯ ಕಾಲೇಜುಗಳಲ್ಲಿ ಪ್ರವೇಶವನ್ನು ಕಡಿಮೆ ಮಾಡಬೇಕು, ಪಾದಚಾರಿ ವೈದ್ಯರುಗಳ ಪದ್ಧತಿಯನ್ನು ಜಾರಿಗೊಳಿಸಬಾರದು-ಮೊದಲಾದುವುಗಳು ಸೇರಿವೆ

ಕರ್ನಾಟಕ ರಾಜ್ಯದಲ್ಲಿ ವೈದ್ಯರು ಮತ್ತು ವೈದಕೀಯ ವಿದ್ಯಾರ್ಥಿಗಳು ಕಳೆದ ಕೆಲವು ವರುಷಗಳಿಂದ ಹೋರಾಟದ ದಾರಿಯನ್ನು ಅನುಸರಿಸುತ್ತಲಿದ್ದಾರೆ. ವೈದ್ಯರುಗಳ ಹೋರಾಟಕ್ಕೆ ಸಂಪೂರ್ಣ ಬೆಂಬಲವೀಯುವುದು ಅವಶ್ಯವಾದರೂ ಒಂದೆರಡು ಅಂಶಗಳನ್ನು ಗಮನಿಸಬೇಕು. ತೀವ್ರವಾಗಿ ಆರ್ಥಿಕ-ಸಾಮಾಜಿಕ ಬಿಕ್ಕಟ್ಟಿಗೊಳಗಾಗಿರುವ ನಮ್ಮ ವ್ಯವಸ್ಥೆಯಲ್ಲಿ ನಿರುದ್ಯೋಗದಂತಹ ಸಮಸ್ಯೆಗಳಿಗೆ ಪರಿಹಾರ ಜೂನಿಯರ್ ವೈದ್ಯರುಗಳು ಹೇಳುವಂತೆ ಕಾಲೇಜುಗಳಿಗೆ ಪ್ರವೇಶ ಕಡಿಮೆ ಮಾಡುವುದರಿಂದಾಗುವುದಿಲ್ಲ. ಬದಲು ವ್ಯವಸ್ಥೆಯಲ್ಲಿ ತೀವ್ರ ಬದಲಾವಣೆ ತರುವುದರಿಂದ ಸಾಧ್ಯವಿದೆ. ನಮ್ಮ ರಾಜ್ಯ (ದೇಶದಲ್ಲೂ)ದಲ್ಲಿ ಸಾಕಷ್ಟು ವೈದ್ಯರುಗಳು ಮತ್ತು ವೈದ್ಯಕೀಯ ಸವಲತ್ತು

(ಕಡೆಯ ಪುಟ ನೋಡಿ)

ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ರಾಜ್ಯದಾದ್ಯಂತ ಯಶಸ್ವಿ ಪ್ರತಿಭಟನೆ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ತಾಲ್ಲೂಕು ರೈತ ಸಂಘದ ನೇತೃತ್ವದಲ್ಲಿ ಶಾಂತಯುತವಾಗಿ ಸರಕಾರಿ ಅರಣ್ಯ ಭೂಮಿ ಆಕ್ರಮಣ ಚಳುವಳಿಯು 5.6.79ರಿಂದ ಪ್ರಾರಂಭಗೊಂಡಿತ್ತು. ಈ ಸಂಬಂಧ ಬಂಧನಕ್ಕೊಳಗಾದವರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ 7.6.79ರಂದು ಶಾಂತಯುತವಾಗಿ ಯಶಸ್ವಿ ಹಳಿಯಾಳ ಬಂದ್ ನಡೆದಾಗ, ಪ್ರತಿಭಟಿಸುತ್ತಿದ್ದ ರೈತರ ಮೇಲೆ ಪೋಲೀಸರು ಗೋಲಿಬಾರುನಡೆಸಿ ಮಾರುತಿ ಪವಾರ ಎಂಬ ರೈತ ಸ್ಥಳದಲ್ಲೆ ಅಸು ನೀಗಬೇಕಾಯಿತು. ನೂರಾರು ಮಂದಿಯ ಬಂಧನವಾಗಿ ಕಾರವಾರ ಜೈಲಿನಲ್ಲಿಡಲಾಯಿತು. ಪೋಲೀಸ್ ದೌರ್ಜನ್ಯವನ್ನು ಖಂಡಿಸಿ, ಮತ್ತು ಹಳಿಯಾಳದ ರೈತರ ಹೋರಾಟಕ್ಕೆ ಬೆಂಬಲಾರ್ಥವಾಗಿ 20-6-79 ರಂದು ರಾಜ್ಯದಾದ್ಯಂತ ಪ್ರತಿಭಟನಾ ಕಾರ್ಯಕ್ರಮವನ್ನು ಹಾಕಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ, ಕರ್ನಾಟಕ ಪ್ರಾಂತ ರೈತಸಂಘ ಮತ್ತು ಸಿ.ಐ.ಟಿ.ಯು. ರಾಜ್ಯ ಸಮಿತಿಗಳು ಕರೆಯಿತ್ತಿದ್ದವು. ಪಾರ್ಟಿ ಕೇಂದ್ರಕ್ಕೆ ದೊರೆತ ವರದಿಯ ಪ್ರಕಾರ ದ.ಕ. ಜಿಲ್ಲೆಯ ಮಂಗಳೂರು ಮತ್ತು ಇತರ ತಾಲ್ಲೂಕು ಕೇಂದ್ರಗಳಲ್ಲಿ, ಮೈಸೂರಿನಲ್ಲಿ, ಕೊಡಗಿನ ವಿರಾಜಪೇಟೆಯಲ್ಲಿ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಯ ಕೆಲವೆಡೆಗಳಲ್ಲಿ, ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಮತ್ತು ಇತರೆಡೆಗಳಲ್ಲಿ, ಬೆಂಗಳೂರು ಜಿಲ್ಲೆಯ ಬೆಂಗಳೂರು, ದೇವನಹಳ್ಳಿ, ದೊಡ್ಡಬಳ್ಳಾಪುರಗಳಲ್ಲಿ, ಧಾರವಾಡ ಜಿಲ್ಲೆಯಲ್ಲಿ ಮತ್ತು ಇತರ ಹಲವೆಡೆಗಳಲ್ಲಿ ಯಶಸ್ವಿ ಪ್ರತಿಭಟನಾ ಕಾರ್ಯಕ್ರಮ ಜರುಗಿದೆ.

ಬೆಂಗಳೂರು ನಗರದಲ್ಲಿ ನೂರಾರು ಮಂದಿ ರೈತ ಕಾರ್ಮಿಕ ಮತ್ತು ವಿದ್ಯಾರ್ಥಿ ಯುವಜನರಿಂದ ಕೂಡಿದ ಮೆರವಣಿಗೆಯು 20ರಂದು ಅಪರಾಹ್ನ 3 ಗಂಟೆಗೆ ಮೈಸೂರು ಬ್ಯಾಂಕ್ ಚೌಕದಿಂದ ಹೊರಟು, ವಿಧಾನಸೌಧದೆದುರಿನ ಗೋಪಾಲಗೌಡ ಚೌಕವನ್ನು ಸೇರಿತು. ಕಾಂ. ಎಚ್. ಮುಗವಾಳಪ್ಪ, ಕಾಂ. ಎಸ್. ಸೂರ್ಯನಾರಾಯಣರಾವ್ ಮತ್ತು ಕಾಂ. ವಿ. ಜೆ. ಕೆ. ನಾಯರ್‌ರವರು ಮುಖ್ಯಮಂತ್ರಿಯವರ ಖಾಸಗಿ (ಆಪ್ತ) ಕಾರ್ಯದರ್ಶಿಯವರನ್ನು ಭೆಟ್ಟಿಯಾಗಿ ಮನವಿಯನ್ನರ್ಪಿಸಿದರು. ಮುಖ್ಯಮಂತ್ರಿಯವರಿಗೆ ಖಾಯಿಲೆಯಾಗಿರುವುದರಿಂದ ಅವರನ್ನು ಭೆಟ್ಟಿ ಮಾಡುವುದಾಗಿಲ್ಲ.

ಬಂಧಿತರೆಲ್ಲರ ಬಿಡುಗಡೆಯಾಗಬೇಕು; ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆಯಬೇಕು; ಮೃತರ ಕುಟುಂಬಕ್ಕೆ ಪರಿಹಾರವೀಯಬೇಕು; ಪೋಲೀಸ್ ಗೋಲಿಬಾರಿನಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು; ಹಳಿಯಾಳ ತಾಲ್ಲೂಕಿನಲ್ಲಿ ಜಾರಿಮಾಡಿರುವ ಪ್ರತಿಬಂಧ ಕಾಜ್ಞೆಯನ್ನು ತೆಗೆಯಬೇಕು; ಸರಕಾರಿ

[ಕಡೆಯ ಪುಟ ನೋಡಿ]

ಆಲಿಪ್ತ ರಾಜ್ಯಗಳ ಬ್ಯೂರೊ ಸಭೆ ಮತ್ತು ಭಾರತ

ಆಲಿಪ್ತ ರಾಷ್ಟ್ರಗಳ ಸಮಾವೇಶಕ್ಕೆ ಪಾಕಿಸ್ತಾನವನ್ನು ಸೇರಿಸುವ ಪ್ರಶ್ನೆ, ಈಜಿಪ್ಟ್ ಮತ್ತು ಪೂರ್ವ ಏಶಿಯಾಗಳ ಬಗ್ಗೆ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿಯವರು ಇತ್ತ ಹೇಳಿಕೆಗಳ ಬಗ್ಗೆ ತನಗಿರುವ ಆತಂಕವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ವ್ಯಕ್ತಪಡಿಸುತ್ತದೆ. ಪಾಕಿಸ್ತಾನವನ್ನು ಆಲಿಪ್ತ ರಾಷ್ಟ್ರಗಳ ಸಮೂಹಕ್ಕೆ ಸೇರಿಸಿಕೊಳ್ಳುವುದಕ್ಕೆ ಏನೂ ಅಡೆತಡೆಗಳಿಲ್ಲವೆಂದೂ, ಈಜಿಪ್ಟಿನ ಮೇಲೆ ಆಲಿಪ್ತ ರಾಷ್ಟ್ರಗಳು ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬುದು ಮೊರಾರ್ಜಿ ದೇಸಾಯಿಯವರ ನಿಲುಮೆ.

ವಿಶ್ವಸಂಸ್ಥೆಯ ಎಲ್ಲಾ ನಿರ್ಣಯಗಳನ್ನು ಮೂಲೆಗೆ ತಳ್ಳಿ, ಜಾಗತಿಕ ಅಭಿಪ್ರಾಯಕ್ಕೆ ಮನ್ನಣೆ ಈಯದೆ ಅಮೇರಿಕ ಸಾಮ್ರಾಜ್ಯಶಾಹಿಯು ಈಜಿಪ್ಟಿನೊಡನೆ ಒಂದು ವ್ಯಾಪಾರವನ್ನು ನಡೆಸಿ. ಈಜಿಪ್ಟ್ ಮತ್ತು ಇಸ್ರಾಯೇಲ್‌ಗಳ ನಡುವೆ ಒಂದು ಪ್ರತ್ಯೇಕ ಒಪ್ಪಂದವನ್ನು ಮಾಡುವಂತೆ ಪಿತೂರಿ ಮಾಡಿತು. ಅರಬರ ಉದ್ದೇಶಗಳಿಗೆ ಮಾರಕವಾದ ಮತ್ತು ಪೇಲೆಸ್ತೀನ್ ನಿರಾಶ್ರಿತರಿಗೆ ತಮ್ಮದೇ ಆದ ಸ್ವಂತ ನಾಡನ್ನು ಪಡೆಯುವ ಉದ್ದೇಶವನ್ನು ಬಲಿ ಇತ್ತು ಈ ಒಪ್ಪಂದವನ್ನು ಮಾಡಲಾಯಿತು. ಈಜಿಪ್ಟಿನ ಸಾದಾತ್ ಅರಬ್ ಉದ್ದೇಶಗಳನ್ನು ಬಲಿಕೊಟ್ಟು ಸಾಮ್ರಾಜ್ಯಶಾಹಿ ಮತ್ತು ಇಸ್ರಾಯೇಲಿನ ರಾಷ್ಟ್ರೀಯವಾದವನ್ನು ಬೆಳೆಸಿ, ಅಮೇರಿಕ ಸಾಮ್ರಾಜ್ಯಶಾಹಿಯು ಪಶ್ಚಿಮ ಏಶಿಯಾದಲ್ಲಿ ಬಿಗುವಾತಾವರಣವನ್ನು ಬೆಳೆಸಲು ಸಹಾಯಮಾಡಿದಂತಾಗಿದೆ. ಕೊಲಂಬೊದಲ್ಲಿ ನಡೆದ ಆಲಿಪ್ತ ರಾಷ್ಟ್ರಗಳ ಸಮ್ಮೇಳನದ ನಿರ್ಣಯಗಳನ್ನು ಕಡೆಗಣಿಸಿ ಮಾಡಿದ ಈ ವಿಚಾರವನ್ನು ಮೊರಾರ್ಜಿ ದೇಸಾಯಿಯವರು ನಿರ್ಲಕ್ಷಿಸದಂತಿದೆ ಅವರು ಇತ್ತ ಹೇಳಿಕೆ. ಅಮೇರಿಕಾ ಸಾಮ್ರಾಜ್ಯಶಾಹಿಯ ಮುಂದಾಳತ್ವದಲ್ಲಿ ಇಸ್ರಾಯೇಲ್ ಮತ್ತು ಈಜಿಪ್ಟ್‌ಗಳೊಳಗೆ ನಡೆದ ಕೇಂಪ್ ಡೇವಿಡ್ ಮಾತುಕತೆಯನ್ನು ಸ್ವಾಗತಮಾಡಿದ್ದ ಪ್ರಧಾನಮಂತ್ರಿಯವರ ಇತ್ತೀಚೆಗಿನ ಹೇಳಿಕೆಗಳನ್ನೂ ಈ ದೃಷ್ಟಿಯಲ್ಲಿ ನೋಡಬೇಕು.

ಪಾಕಿಸ್ತಾನದ ಮಿಲಿಟರಿ ಸರ್ವಾಧಿಕಾರಕ್ಕೆ ಅಮೇರಿಕ ಸಾಮ್ರಾಜ್ಯಶಾಹಿಯು ಯಾವ ರೀತಿಯಲ್ಲಿ ಶಸ್ತ್ರ ಸರಬರಾಜು ಮಾಡುತ್ತಿದೆ, ಪಾಕಿಸ್ತಾನವು ಅಣು ಶಸ್ತ್ರಗಳನ್ನು ತಯಾರಿಸುವ ಸಿದ್ಧತೆ ನಡೆಸುವುದನ್ನು ಉಪಯೋಗಿಸಿ ಭಾರತವು ಸಂಪೂರ್ಣ ಅಣುಸಂರಕ್ಷಿತ ಭದ್ರತೆಗಳನ್ನು ಅನುಸರಿಸಬೇಕೆಂದು ಅಮೇರಿಕ ಸಾಮ್ರಾಜ್ಯಶಾಹಿಯು ನಡೆಸುವ ಮೋಸ, ಸೋವಿಯತ್ ಬೆಂಬಲಿತ ಮಿಲಿಟರಿ ಆಕ್ರಮಣಗಳನ್ನು ತಡೆಯಲು ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಪಾಕಿಸ್ತಾನಗಳ ನಡುವಿನ ಒಪ್ಪಂದವು ಬದ್ಧವಾಗಿದೆ ಎಂಬುದಾಗಿ ಇತ್ತೀಚೆಗೆ ಅಮೇರಿಕಾ ಸಂಯುಕ್ತ ಸಂಸ್ಥಾನದ ಗೃಹ ಉಪಕಾರ್ಯದರ್ಶಿ ಕ್ರಿಸ್ಟೋಫರ್ ವಾರನ್ ಇತ್ತ ಹೇಳಿಕೆ-ಇವನ್ನೆಲ್ಲಾ ಪಾಕಿಸ್ತಾನವನ್ನು ಆಲಿಪ್ತ ರಾಷ್ಟ್ರಗಳ ಸಮೂಹಕ್ಕೆ ಸೇರಿಸಬೇಕೆನ್ನುವ ಪ್ರಧಾನ ಮಂತ್ರಿಯವರಿಗೆ ನೆನಪು ಮಾಡುವ ಅಗತ್ಯವಿಲ್ಲ. ಪಾಕಿಸ್ತಾನವು ಔಪಚಾರಿಕವಾಗಿ ಮಿಲಿಟರಿ ಕೂಟಕ್ಕೆ ಸೇರಿಲ್ಲವಾದರೂ, ಅಮೇರಿಕ ಸಾಮ್ರಾಜ್ಯಶಾಹಿಯೊಂದಿಗೆ ಮಿಲಿಟರಿ ಸಂಬಂಧಗಳಲ್ಲಿ ಸಿಕ್ಕಿಹಾಕಿಕೊಂಡಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಹೇಳುವದಿದ್ದರೆ, ಪಾಕಿಸ್ತಾನವು ರಾಷ್ಟ್ರದೊಳಗೆ 'ಮಾರ್ಶಿಯಲ್‌ಲಾ' ಆಡಳಿತೆಯ ಮೂಲಕ ಪ್ರಜಾಪ್ರಭುತ್ವವನ್ನು ಹತ್ತಿಕ್ಕಿದೆ. ಈ ಹಿನ್ನೆಲೆಯಲ್ಲಿ ಆಲಿಪ್ತ ರಾಷ್ಟ್ರಗಳ ಸಮೂಹಕ್ಕೆ ಪಾಕಿಸ್ತಾನವನ್ನು ಸೇರಿಸುವುದರಿಂದ ಆಲಿಪ್ತ ರಾಷ್ಟ್ರಗಳ ಚಳುವಳಿಯ ನಿಯಮಗಳನ್ನು ಸಡಿಲಗೊಳಿಸಿದಂತಾಗುವುದು.

ಭಾರತ ದೇಶದ ಸರಕಾರದ ಈ ಹೊಯ್ದಾಟವನ್ನು ನೋಡಿದಲ್ಲಿ, ಭಾರತ ದೇಶದ ಸಾಮ್ರಾಜ್ಯಶಾಹಿ ವಿರೋಧಿ ಪರಂಪರೆ ಮತ್ತು ಆಲಿಪ್ತ ರಾಷ್ಟ್ರಗಳ ಚಳುವಳಿಯ ಮೌಲ್ಯಗಳನ್ನು ನೀರುಪಾಲು ಮಾಡಲಾಗುತ್ತಿದೆ ಎಂಬ ಅಭಿಪ್ರಾಯಕ್ಕೆ ದೇಶದ ಜನತೆಯು ಬರಲೇಬೇಕಾಗುತ್ತದೆ.

ಈಜಿಪ್ಟ್‌ನ ಸಾದಾತ್ ಆಡಳಿತೆಯು ಅಮೇರಿಕಾ ಸಾಮ್ರಾಜ್ಯಶಾಹಿಯ ಕೈಗೊಂಬೆಯಾಗಿ ವರ್ತಿಸುವುದನ್ನು

[ಕಡೆಯ ಪುಟ ನೋಡಿ]

ಧಾರವಾಡದ ಕೃಷಿಕಾರ್ಮಿಕರ ಹೋರಾಟಕ್ಕೆ ವಿದ್ಯಾರ್ಥಿಗಳ ಭಾರಿ ಬೆಂಬಲ

ದಿನಾಂಕ 11-6-79 ರಂದು ಪ್ರಾರಂಭವಾದ ಕೃಷಿವಿಶ್ವವಿದ್ಯಾಲಯದ ಕಾರ್ಮಿಕರ ಸಂಪಿಗೆ ತಾ. 13-6-79 ರಂದು ಕೃಷಿ ಕಾಲೇಜಿನ ವಿದ್ಯಾರ್ಥಿಗಳು ಈ ಬೇಡಿಕೆಗಳನ್ನು ಪರಿಶೀಲಿಸಿ ಈಡೇರಿಸಬೇಕೆಂದು ಕೃಷಿವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ತಾರು ಮಾಡಿದ್ದರು. ಆದರೆ ಮೇಲಧಿಕಾರಿಗಳಿಂದ ಯಾವುದೇ ಉತ್ತರ ಬಾರದೇ ಹಾಗೂ ಸಂಪು ಮುಂದುವರಿದ ಎಂಟನೇ ದಿನವಾದ ತಾ. 18-8-79ರಂದು ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಕೃಷಿ ಕಾರ್ಮಿಕರ ಜೊತೆಗೆ ವಿಶ್ವವಿದ್ಯಾಲಯದ ಆವರಣದ ತುಂಬೆಲ್ಲಾ ಮೆರವಣಿಗೆ ತೆಗೆದರು. ಅಧಿಕ ಸಂಖ್ಯೆಯಲ್ಲಿ ನೆರೆದಿದ್ದ ವಿದ್ಯಾರ್ಥಿಗಳು ಹಾಗೂ ಕೃಷಿಕೂಲಿಕಾರರೂ ಕೂಡಿ ತಗೆದ ಮೆರವಣಿಗೆ ಕಾಲೇಜು ಇತಿಹಾಸದಲ್ಲಿ ಅತ್ಯಧಿಕ ದೊಡ್ಡದಾದ ಬಹಳ ಸ್ಪೂರ್ತಿದಾಯಕ ಮೆರವಣಿಗೆಯಾಗಿತ್ತು. ವಿದ್ಯಾರ್ಥಿಗಳು "ಕೃಷಿ ಕಾರ್ಮಿಕರ ಬೇಡಿಕೆಗಳು-ಈಡೇರಲಿ; ಕೃಷಿಕಾರ್ಮಿಕರು ಮನುಷ್ಯರು, ದನಗಳಲ್ಲ; ಮಂತ್ರಿ ಶಾಸಕರ ಪಗಾರ ಏರಿದೆ, ಆದರೆ ಕೃಷಿಕೂಲಿಕಾರರ ಕೂಲಿ ಹೆಚ್ಚಿಲ್ಲ; ಬೆಲೆಗಳು ಏರಿವೆ, ಆದರೆ ಪಗಾರ ಏರಿಲ್ಲ; ಕೃಷಿಕಾರ್ಮಿಕರು ಮನುಷ್ಯರು, ಅಧಿಕಾರಿಗಳು ಕತ್ತೆಗಳು; ಪಕ್ಷದ ಜಗಳದಲ್ಲಿ ಮರೆತಿರುವ ಸರಕಾರಕ್ಕೆ ಧಿಕ್ಕಾರ; ಅಧಿಕಾರಿಶಾಹಿಗೆ ಧಿಕ್ಕಾರ, ವಿದ್ಯಾರ್ಥಿ-ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ" ಎನ್ನುವ ಘೋಷಣೆಗಳನ್ನು ಕೂಗುತ್ತ ವಿಶ್ವವಿದ್ಯಾಲಯದ ಆವರಣದಲ್ಲಿ ಸುತ್ತುತ್ತಿರುವಾಗ ವಿದ್ಯಾರ್ಥಿ ಕಾರ್ಮಿಕರ ಐಕ್ಯತೆಯಾಗಿತ್ತು. ಒಂದುಗೂಡಿದ ವಿದ್ಯಾರ್ಥಿ ಕಾರ್ಮಿಕರ ಐಕ್ಯತೆ ಅಧಿಕಾರಿಗಳನ್ನು ನಡುಗಿಸಿತ್ತು. ನೌಕರರ, ವಿದ್ಯಾರ್ಥಿಗಳೆಲ್ಲರ ಬೆಂಬಲ ಕಂಡ ಕೃಷಿಕಾರ್ಮಿಕರಿಗೆ ದುಡಿಯುವ ಜನತೆಯ ಹಾಗೂ ಪ್ರಜ್ಞಾವಂತ ಯುವಕರೆಲ್ಲರ ಬೆಂಬಲ ನಮಗಿದೆ ಎನ್ನುವ ಸ್ಪೂರ್ತಿ ಬಂದಿತ್ತು.

ನಂತರ ವಿದ್ಯಾರ್ಥಿ ಸಂಘದ ಅಧ್ಯಕ್ಷ ಹಾಲಳ್ಳಿಯವರ ನೇತೃತ್ವದಲ್ಲಿ ವಿದ್ಯಾರ್ಥಿಗಳು ಅಧಿಕಾರಿಗಳಿಗೆ ಹಾಗೂ ಕುಲಪತಿಗಳಿಗೆ ಮನವಿ ಪತ್ರ ಅರ್ಪಿಸಿದರು. ವಿದ್ಯಾರ್ಥಿಗಳೆಲ್ಲರು ಕೂಡಿ ಕೃಷಿಕಾರ್ಮಿಕರ ಬೆಂಬಲ ಕೊಡುವ ಮೆರವಣಿಗೆ ತ್ತೆಗೆಯುವಂತೆ ಸಂಘಟಿಸುವಲ್ಲಿ ಎಸ್. ಎಫ್. ಐ. ದ ವಿದ್ಯಾರ್ಥಿ ಕಾರ್ಯಕರ್ತರು ಮಾಡಿದ ಕೆಲಸ ಮೆಚ್ಚುವಂತಹದು. ಮನವಿ ಅರ್ಪಿಸಿದ್ದಲ್ಲದೆ, ಕೂಡಲೇ ಈಡೇರದಿದ್ದರೆ ಭಾರೀ ಸಮೂಹದಲ್ಲಿ ವಿದ್ಯಾರ್ಥಿಗಳು ಸೇರಿ ಸಂಪನ್ನು ತೀವ್ರ ಗತಿಯಲ್ಲಿ ನಡೆಸಬೇಕಾಗುತ್ತದೆ ಎನ್ನುವ ಬೆದರಿಕೆ ಹಾಕಿದಾಗ ಅಧಿಕಾರಿಗಳಿಗೆಲ್ಲ ಹೆದರಿಕೆ ಹತ್ತಿತ್ತು. ಕೂಡಲೇ ಫೋನು, ತಾರುಗಳು ಓಡಾಡಿದವು.

ಹಂಗಾಮಿ ನೌಕರರ ಬೆಂಬಲ :

ಕೃಷಿ ವಿಶ್ವವಿದ್ಯಾಲಯದ ಹಂಗಾಮಿ ನೌಕರರು ತಾ. 14 ರಂದು ಬೆಳಿಗ್ಗ 10 ಗಂಟೆಗೆ ಕಾಲೇಜು ಮುಂದೆ ಸಭೆ ಸೇರಿ ಶೈಕ್ಷಣಿಕ ನಿರ್ದೇಶಕರಿಗೆ ಮನವಿ ಅರ್ಪಿಸಿ ಕೃಷಿಕಾರ್ಮಿಕರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿದ್ದಾರೆ.

ವಿಶ್ವವಿದ್ಯಾಲಯದ ಶಿಕ್ಷಕರ ಬೆಂಬಲ :

ಕೃಷಿವಿಶ್ವವಿದ್ಯಾಲಯದ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿಯ ಸಭೆ ತಾ. 15 ರಂದು ಸೇರಿ ಕೃಷಿಕಾರ್ಮಿಕರಿಗೆ ಬೆಂಬಲಿಸಿ ನಿರ್ಣಯವನ್ನು ಅಂಗೀಕರಿಸಿತು.

ಮಕ್ಕಳನ್ನು ಎತ್ತಿಕೊಂಡು ನಾಲ್ಕು ಮೈಲು ಕಾಲ್ನಡಿಗೆ ಜಾಥಾ :

ದಿನಾಂಕ 13-6-79 ರಂದು ಕೃಷಿ ಕಾಲೇಜಿನಿಂದ ನಾಲ್ಕು ಮೈಲು ದೂರ ಇರುವ ಜಿಲ್ಲಾಧಿಕಾರಿಗಳ ಆಫೀಸಿಗೆ ಸುಮಾರು 500ಕ್ಕೂ ಹೆಚ್ಚು ಕಾರ್ಮಿಕರು ಅದರಲ್ಲೂ ವಿಶೇಷವಾಗಿ ಮಕ್ಕಳನ್ನು ಎತ್ತಿಕೊಂಡು ಸುಮಾರು 250 ಮಹಿಳಾ ಕಾರ್ಮಿಕರು ಕಾಲ್ನಡಿಗೆಯ ಮೆರವಣಿಗೆಯಲ್ಲಿ ಬಂದು ವಿಶೇಷ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿ ಒಂದು ತಾಸು ಧರಣಿ ಮುಷ್ಕರ ಹೂಡಿದರು. ನಂತರ ಧಾರವಾಡದ ಪ್ರಮುಖ ಬೀದಿಗಳಲ್ಲಿ ಘೋಷಣೆ ಕೂಗಿದ ಘೋಷಣೆಗಳು ಜನರ ಸಹಾನುಭೂತಿ ಗಳಿಸುವಂತಿದ್ದವು. ಧಾರವಾಡದ ಬೀದಿಗಳಲ್ಲಿ ಸಾಗಿಬಂದ ಮೆರವಣಿಗೆ ಜ್ಯುಬಿಲಿ ಸರ್ಕಲ್‌ನಲ್ಲಿ ಸಭೆಯಾಗಿ ಮುಕ್ತಾಯಗೊಂಡಿತ್ತು. ಸಭೆಯಲ್ಲಿ ಕೃಷಿಕಾರ್ಮಿಕರ ಸಂಘದ ಅಧ್ಯಕ್ಷ ಜಿ. ಎ. ಹಿರೇಮಠ ಹಾಗೂ ಬೆಂಬಲಾರ್ಥವಾಗಿ ದಲಿತ ಸಂಘರ್ಷ ಸಮಿತಿಯ ಸಂಚಾಲಕ ವಿಜಯ ಪಾಟೀಲ ಮಾತನಾಡಿದರು.

ಂ

ಬೀಡಿ ಕೆಲಸಗಾರರ ಮಹಾಸಭೆ

ಮಂಗಳೂರು ಬೀಡಿ ಕೆಲಸಗಾರರ ಸಂಘದ 15ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಎ. ಕೆ. ನಾರಾಯಣರವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಕಾರ್ಯದರ್ಶಿ ಕಾಂ. ಜಿ. ವೀರಪ್ಪನವರು ಕಳೆದ ಎರಡು ವರ್ಷಗಳ ಕಾಲಾವಧಿಯ ಚಟುವಟಿಕೆಗಳ ಹಾಗೂ ರಾಜಕೀಯ ಪರಿಸ್ಥಿತಿಯ ಬಗ್ಗೆ ಮತ್ತು ಸಂಘಟನೆಗಳ ಹಾಗೂ ಹೋರಾಟಗಳ ವಿವರವಾದ ವರದಿಯನ್ನು ನೀಡಿದರು. ವರದಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ನಂತರ ಖಜಾಂಚಿ ಕಾಂ. ಕಮಲಾಕ್ಷ ಬಂಗೇರರು ಲೆಕ್ಕ ಪತ್ರವನ್ನು ಮಹಾಸಭೆಯ ಮುಂದಿಟ್ಟು ಅದು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಮುಖ್ಯ ಅತಿಥಿಗಳಾದ ರಾಜ್ಯ ಬೀಡಿ ಫೆಡರೇಶನಿನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್‌ರವರು ಬೆಳೆಯುತ್ತಿರುವ ಬೀಡಿ ಕಾರ್ಮಿಕರ ಚಳುವಳಿಗಳ ಬಗ್ಗೆ ವಿವರ ನೀಡಿದರು. ನಂತರ ಕಾಂ. ಬಿ. ವಿಷ್ಣುಮೂರ್ತಿಯವರು ವಿವಿಧ ಕಾರ್ಮಿಕ ವರ್ಗಗಳ ಚಳುವಳಿ ಹಾಗೂ ಕಾರ್ಮಿಕರ ಹೋರಾಟದ ಅವಶ್ಯಕತೆಗಳ ಬಗ್ಗೆ ವಿವರಿಸಿದರು.

ಹಳಿಯಾಳ ರೈತರ ಹೋರಾಟಗಳ ಬಗ್ಗೆ 20-6-79 ರಂದು ಹಳಿಯಾಳ ದಿನಾಚರಣೆಯಲ್ಲಿ ಭಾಗವಹಿಸುವ ಮತ್ತು ಬಂದರ ಕಾರ್ಮಿಕರಿಗೆ ಬೆಂಬಲ ನೀಡುವ ಠರಾವುಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಕೊನೆಗೆ ಅಧ್ಯಕ್ಷರು ಬೀಡಿ ಕಾರ್ಮಿಕರ ಶೋಷಣೆಯ ವಿರುದ್ಧ ಕಾರ್ಮಿಕರು ಸಂಘಟಿತರಾಗಿ ಹೋರಾಡುವಂತೆ ಕರೆಯಿತ್ತರು.

ಮುಂದಿನ ವರ್ಷಕ್ಕೆ ಕಾಂ. ಎ. ಕೆ. ನಾರಾಯಣ ಅಧ್ಯಕ್ಷರಾಗಿಯೂ, ಕಾಂ. ಉಮಾನಾಥ್, ಕಾಂ. ಲೋಕಯ್ಯ ಶೆಟ್ಟಿಯವರು ಉಪಾಧ್ಯಕ್ಷರಾಗಿಯೂ, ಕಾಂ. ಜಿ. ವೀರಪ್ಪನವರು ಕಾರ್ಯದರ್ಶಿಗಳಾಗಿಯೂ, ಕಾಂ. ಬಾಪು ಮತ್ತು ಕಾಂ. ನಾರಾಯಣರಾವ್ ಜೊತೆ ಕಾರ್ಯದರ್ಶಿಗಳಾಗಿಯೂ, ಕಾಂ. ಕಮಲಾಕ್ಷ ಬಂಗೇರರು ಖಜಾಂಚಿಯಾಗಿಯೂ ಇರುವ 22 ಮಂದಿ ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯ್ತು.

ಕರ್ನಾಟಕ ಪ್ರಾಂತ ರೈತಸಂಘ ಕಾರ್ಯಕಾರಿ ಸಮಿತಿ ಸಭೆ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಜೂನ್ 29 ಮತ್ತು 30 ರಂದು ಪ್ರಾಂತ ರೈತಸಂಘದ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆಯಲಾಗಿದೆ. 29ರಂದು ಬೆಳಿಗ್ಗ 11 ಗಂಟೆಗೆ ಸಭೆಯು ಪ್ರಾರಂಭವಾಗುವುದು. ಹಳಿಯಾಳದಲ್ಲಿನ ಭೂ ಆಕ್ರಮಣ ಚಳುವಳಿ, ಪೋಲೀಸ್ ದೌರ್ಜನ್ಯ, ರಾಜ್ಯದಾದ್ಯಂತ ಬೇಡಿಕೆಗಳಿಗಾಗಿ ಹೋರಾಟದ ಕಾರ್ಯಕ್ರಮ, ಸಂಘಟನಾ ವಿಚಾರ ಮೊದಲಾದುವುಗಳನ್ನು ಚರ್ಚಿಸಲಾಗುವುದು. ಈ ಪ್ರಾಮುಖ್ಯ ಸಭೆಯಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರುಗಳು, ಅಧಿಕಾರಿ ವರ್ಗದವರೂ ಸೇರಿ. ತಪ್ಪದೆ ಭಾಗವಹಿಸಬೇಕಾಗಿ ವಿನಂತಿ.

ಬೆಂಗಳೂರು ಕಡೆಯಿಂದ ಬರುವವರು, ಸಂಜೆ 7 ಗಂಟೆಗೆ ಬೆಂಗಳೂರಿಂದ ಹೊರಡುವ ಸೂಪಾ ಎಕ್ಸ್‌ಪ್ರೆಸ್‌ನಲ್ಲಿ ಬಂದರೆ ನೇರವಾಗಿ ಹಳಿಯಾಳಕ್ಕೆ ಬರಬಹುದು. ಉಳಿದೆಡೆಗಳಿಂದ ಬರುವವರಿಗೆ ನೇರವಾಗಿ ಹಳಿಯಾಳಕ್ಕೆ ಬಸ್ಸು ಇಲ್ಲವಾದರೆ, ಹುಬ್ಬಳಿ, ಅಥವಾ ಧಾರವಾಡಕ್ಕೆ ಬಂದು, ಅಲ್ಲಿಂದ ಬೇರೆ ಬಸ್ಸು ಮೂಲಕ ಹಳಿಯಾಳವನ್ನು ಸೇರಬಹುದು.

ಕಾಂ. ಎಚ್. ಮುಗವಾಳಪ್ಪ
ಅಧ್ಯಕ್ಷ

ಕಾಂ. ಪಿ. ರಾಮಚಂದ್ರರಾವ್
ಕಾರ್ಯದರ್ಶಿ

ಕರ್ನಾಟಕ ಪ್ರಾಂತ ರೈತಸಂಘ

ಎಲ್ಲಾ ಕಾರ್ಮಿಕ ಸಂಘಟನೆಗಳ ಸಂಯುಕ್ತರಂಗ ರಚನೆಗೆ ಸಿ.ಐ.ಟಿ.ಯು. ವಿನ ಕರೆ

ಕಾರ್ಮಿಕ ಚಳುವಳಿಗೆ ಸಂಬಂಧಿಸಿ ಮುಖ್ಯ ಪಟ್ಟ ವಿಚಾರಗಳ ಮೇಲೆ ಪರಸ್ಪರ ವಿಮರ್ಶೆ ನಡೆಸಿ, ಸಲಹೆಗಳ ವಿನಿಮಯ ಮಾಡಿ ಕಾರ್ಮಿಕ ವರ್ಗದ ಐಕ್ಯಹೋರಾಟದ ತಳಹದಿಯನ್ನು ವಿಶಾಲಗೊಳಿಸಲು ಅನುಕೂಲವಾಗುವ ದೃಷ್ಟಿಯಿಂದ ರಾಷ್ಟ್ರೀಯ ಮಟ್ಟದ ಎಲ್ಲಾ ಕಾರ್ಮಿಕ ಸಂಘಟನೆಗಳ ಒಂದು ಕೊನ್‌ಫೆಡರೇಷನ್ ರಚಿಸುವ ಸೂಚನೆಯನ್ನು ಸಿ.ಐ.ಟಿ.ಯು. ಮುಂದಿಟ್ಟಿದೆ. ಈ ಬಗ್ಗೆ, ಸಿ.ಐ.ಟಿ.ಯು. ನಾಲ್ಕನೆ ಸಮ್ಮೇಳನದ ನಿರ್ಣಯಗಳ ಆಧಾರದಲ್ಲಿ ಸಿ.ಐ.ಟಿ.ಯು.ವಿನ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿ, ಎಂ.ಪಿ. ಇವರು ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳಿಗೂ, ನಲವತ್ತೊಂದು ಉದ್ಯಮವಾರು ಕಾರ್ಮಿಕ ಫೆಡರೇಷನ್‌ಗಳಿಗೂ ಎಪ್ರಿಲ್ ತಿಂಗಳಿನಲ್ಲಿ ಬರೆದಿರುವರು. ಐ.ಎನ್.ಟಿ.ಯು.ಸಿ., ಎ.ಐ.ಟಿ.ಯು.ಸಿ., ಯು.ಟಿ.ಯು.ಸಿ., ಹೆಚ್.ಎಮ್.ಎಸ್., ಬಿ.ಎಮ್.ಎಸ್., ಟಿ.ಯು.ಸಿ.ಸಿ., ಎನ್.ಎಲ್.ಒ. ಮತ್ತು ಇತರ ಕೇಂದ್ರ ಸಂಘಟನೆಗಳಿಗೆ ಬರೆಯಲಾಗಿದೆ.

ಸಮಾನ ನಿಲುವುಗಳನ್ನು ತಾಳಲು ಮತ್ತು ಏಕಾಭಿಪ್ರಾಯಕ್ಕೆ ಬರಲು ಸಾಧ್ಯವಾಗುವಂತೆ ಮಾಡುವ ದೃಷ್ಟಿಯಿಂದ ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಉದ್ಯಮವಾರು ಫೆಡರೇಷನ್‌ಗಳ ಒಂದು ಕೊನ್‌ಫೆಡರೇಷನ್, ಇದು ಸಾಧ್ಯವಾಗಿಲ್ಲವಾದರೆ ಕನಿಷ್ಟ ಒಂದು ಕಾರ್ಮಿಕ ಸಮನ್ವಯ ಸಮಿತಿಯನ್ನು ರಚಿಸಲು ಸಿ.ಐ.ಟಿ.ಯು.ವಿನ ನಾಲ್ಕನೇ ಅಧಿವೇಶನದಲ್ಲಿ ಸಿ.ಐ.ಟಿ.ಯು.ವಿನ ಅಧ್ಯಕ್ಷ ಕಾಂ. ಬಿ. ಟಿ. ರಣದಿವೆಯವರು ಸೂಚಿಸಿದ್ದರು.

ಕಾರ್ಮಿಕ ಸಂಘಟನೆಗಳ ಸಂಯುಕ್ತ ಮಂಡಲಿ (ಯುನೈಟೆಡ್ ಕೌನ್ಸಿಲ್ ಆಫ್ ಟ್ರೇಡ್‌ಯೂನಿಯನ್ಸ್)ಯಂತೆ ಒಂದು ವಿಶಾಲ ತಳಹದಿಯ ಸಂಘಟನೆಯನ್ನು ರಚಿಸಲು ಪ್ರಯತ್ನಿಸುವ ಬಗ್ಗೆ ಸಿ.ಐ.ಟಿ.ಯು.ವಿನ ನಾಲ್ಕನೇ ಅಧಿವೇಶನದಲ್ಲಿ ನಿರ್ಣಯವನ್ನು ಮಾಡಲಾಗಿತ್ತು. "ಕಾರ್ಮಿಕ ವರ್ಗದ ಹಿತವನ್ನು ರಕ್ಷಿಸುವುದಕ್ಕಾಗಿ" ಇತರ ಸಂಘಟನೆಗಳೊಂದಿಗೆ ಸಹಕರಿಸಲು ಸಿ.ಐ.ಟಿ.ಯು. ತನ್ನ ಕೈಲಾದ್ದನ್ನೆಲ್ಲಾ ಮಾಡಲು ಶ್ರಮಿಸುತ್ತದೆ" ಎಂಬುದಾಗಿ ಈ ನಿರ್ಣಯದಲ್ಲಿ ಹೇಳಲಾಗಿದೆ.

ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳಿಂದ ಮತ್ತು ಉದ್ಯಮವಾರು ಕಾರ್ಮಿಕ ಫೆಡರೇಷನುಗಳಿಂದ ಉತ್ತರ ಬರಬೇಕಷ್ಟೆ. ಆದರೆ, ಕಾರ್ಮಿಕ ಚಳುವಳಿಯ ಹಿತದ ದೃಷ್ಟಿಯಿಂದ ಐಕ್ಯತೆಯ ತಳಹದಿಯ ಒಂದು ರಂಗವನ್ನು ರಚಿಸಲು ಸಾಧ್ಯವಾಗುವಂತಹ ಪ್ರತಿಕ್ರಿಯೆಗಳು ಬರುವ ನಿರೀಕ್ಷೆಯಿದೆ.

[8ನೇ ಪುಟ ನೋಡಿ]

ನೇಪಾಳದ ವಿದ್ಯಮಾನಗಳು

—ಆರ್. ಚಂದ್ರ

ಇತ್ತೀಚೆಗೆ ನಮ್ಮ ನೆರೆರಾಜ್ಯವಾದ ನೇಪಾಳದಲ್ಲಿ ಅರಸೊತ್ತಿಗೆಯ ವಿರುದ್ಧ, ಶೋಷಣೆ ಹಾಗೂ ದಬ್ಬಾಳಿಕೆಗಳ ವಿರುದ್ಧ ಮತ್ತು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ವ್ಯಾಪಕವಾದ ಪ್ರಜಾಸತ್ತಾತ್ಮಕ ಹೋರಾಟಗಳು ತೀವ್ರವಾಗುತ್ತಿವೆ. ನೇಪಾಳದಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ, ಕಾರ್ಮಿಕರ ಮತ್ತು ರೈತರ ಆಂದೋಳನವು ಭಾರತದ ಜನರಲ್ಲಿ ಸಾಕಷ್ಟು ಆಸಕ್ತಿ ಹುಟ್ಟಿಸಿರುವುದು ಸಹಜವಾಗಿದೆ. ಅಲ್ಲಿನ ಇತ್ತೀಚಿನ ವಿದ್ಯಮಾನಗಳ ಸಂಕ್ಷಿಪ್ತ ಪರಿಚಯ ಇಲ್ಲಿ ನೀಡಲಾಗಿದೆ.

ಅರಸೊತ್ತಿಗೆ, ಆರ್ಥಿಕ ದುಃಸ್ಥಿತಿ :

ನೇಪಾಳವು ಹಿಮಾಲಯದ ದಕ್ಷಿಣದಲ್ಲಿ ಭಾರತ ಮತ್ತು ಚೀನಾ ದೇಶಗಳ ಆಯಕಟ್ಟಿನ ಪ್ರದೇಶದಲ್ಲಿ 140,797 ಚದರ ಕಿ. ಮೀ. ವಿಸ್ತೀರ್ಣಕ್ಕೆ ಹರಡಿಕೊಂಡಿದೆ. 1974 ರಲ್ಲಿ ಇಲ್ಲಿನ ಜನಸಂಖ್ಯೆ 12.57 ಮಿಲಿಯವಾಗಿತ್ತು. ಚಿಕ್ಕಪುಟ್ಟ ಪಾಳೆಯಗಾರರಲ್ಲಿ ಹರಿದು ಹಂಚಿಹೋಗಿದ್ದ ಈ ಪ್ರದೇಶವು 19ನೇ ಶತಮಾನದಲ್ಲಿ ಅರಸೊತ್ತಿಗೆಯಲ್ಲಿ ಬಂದಾಯಿತು. ಅರಸೊತ್ತಿಗೆಯು 1951ರ ವರೆಗೂ ಮುಂದುವರಿದು, ಆ ವರ್ಷ ಜನಪ್ರಿಯ ಸರಕಾರವನ್ನು ರಚಿಸಲಾಯಿತು. ಆದರೆ, 1960ರ ಅಂತ್ಯದಲ್ಲಿ ಆಗಿನ ದೊರೆ ಮಹೇಂದ್ರರು ಸಂಸತ್ತನ್ನು ಅಮಾನತುಗೊಳಿಸಿದರು, ಚುನಾಯಿತ ಸರಕಾರವನ್ನು ವಜಾಗೊಳಿಸಿದರು, ಪ್ರಧಾನಿ ಬಿ. ಪಿ. ಕೊಯಿರಾಲ ಮುಂತಾದ ರಾಜಕೀಯ ಧುರೀಣರನ್ನು ಸೆರೆಮನೆಗೆ ಕಳುಹಿಸಿದರು ಮತ್ತು ಸಂಪೂರ್ಣ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡರು. 1962ರ ಅಂತ್ಯದಲ್ಲಿ ಅವರು ಒಂದು ಹೊಸ ಸಂವಿಧಾನವನ್ನು ಘೋಷಿಸಿದರು. ಅದರಂತೆ, 'ಪಕ್ಷಾತೀತ ಪಂಚಾಯತ್ ಪ್ರಜಾಪ್ರಭುತ್ವ'ವನ್ನು ಸ್ಥಾಪಿಸಿದರು. ಈ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಸಂಸತ್ತಿಗೆ ಕೆಲವರು ಚುನಾಯಿತ ಸದಸ್ಯರಿದ್ದರೆ, ಕೆಲವರು ದೊರೆಗಳಿಂದಲೇ ನೇಮಿಸಲ್ಪಟ್ಟವರಾಗಿದ್ದರು. ಸಂಸತ್ತು ದೊರೆಗಳ ಸಲಹಾ ಮಂಡಳಿ ಅಷ್ಟೆ. 1972 ರಲ್ಲಿ ದೊರೆ ಮಹೇಂದ್ರರು ಸತ್ತ ಮೇಲೆ, ಅವರ ಮಗ ದೊರೆ ಬೀರೇಂದ್ರರು ಅಧಿಕಾರಕ್ಕೆ ಬಂದಂದಿನಿಂದಲೂ 'ಪಂಚಾಯತ್' ಪದ್ಧತಿಯೇ ಮುಂದುವರಿಯಿತು.

ನೇಪಾಳವು ವಿಪುಲವಾಗಿ ನೈಸರ್ಗಿಕ ಸಂಪತ್ತನ್ನು ಹೊಂದಿದ್ದರೂ, ಜನರ ಜೀವನಮಟ್ಟವು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ನೇಪಾಳದ ಜನರ ಒಟ್ಟು ರಾಷ್ಟ್ರೀಯ ಉತ್ಪಾದನೆಯ (G. N. P) ವಾರ್ಷಿಕ ಸರಾಸರಿಯು 1974 ರಲ್ಲಿ ಕೇವಲ $100 ಆಗಿತ್ತು. ಅದೇ ವರುಷದಲ್ಲಿ ಭಾರತದ ಮತ್ತು ಚೀನಾದ ಜನರ ವಾರ್ಷಿಕ ಸರಾಸರಿಗಳು ಅನುಕ್ರಮವಾಗಿ $140 ಮತ್ತು $300 ಆಗಿದ್ದವು. 1965-74ರ ಅವಧಿಯಲ್ಲಿ ನೇಪಾಳದ ಆರ್ಥಿಕ ಅಭಿವೃದ್ಧಿಯ ದರವು ಶೂನ್ಯವಾಗಿತ್ತು. ಭಾರತದ ಮತ್ತು ಚೀನಾದ ಅಭಿವೃದ್ಧಿಯ ದರಗಳು ಅನುಕ್ರಮವಾಗಿ ಶೇ 1.3 ಮತ್ತು ಶೇ. 3.5ರಷ್ಟಾಗಿದ್ದವು. ಈ ಅವಧಿಯಲ್ಲಿ ನೇಪಾಳ, ಭಾರತ ಮತ್ತು ಚೀನಾ ದೇಶಗಳ ಜನಸಂಖ್ಯೆಯ ಹೆಚ್ಚಳದ ದರಗಳು ಅನುಕ್ರಮವಾಗಿ ಶೇ. 2.2, ಶೇ. 2.3 ಮತ್ತು ಶೇ. 1.7ರಷ್ಟಾಗಿದ್ದವು. (ಆಧಾರ : ವಿಶ್ವಬ್ಯಾಂಕು ವರದಿ, 1976).

ನೇಪಾಳದ ಆರ್ಥಿಕ ಅಭಿವೃದ್ಧಿಯು ಪ್ರಾರಂಭದಲ್ಲಿ ಹೆಚ್ಚಾಗಿ ವಿದೇಶಿ ನೆರವನ್ನೇ ಅವಲಂಬಿಸಿತ್ತು. ಮೊದಲ ಪಂಚವಾರ್ಷಿಕ ಯೋಜನೆ (1956–61)ಯ ಒಟ್ಟು ಸಂಪನ್ಮೂಲಗಳ ಸಂಗ್ರಹಣೆಯಲ್ಲಿ ಶೇ. 90ರಷ್ಟು ವಿದೇಶಿ ನೆರವೇ ಆಗಿತ್ತು. ಎರಡೇ ಯೋಜನೆಯಲ್ಲಿ ವಿದೇಶಿ ನೆರವಿನ ಪಾಲು ಶೇ. 80 ರಷ್ಟಾಗಿದ್ದು, ಮೂರನೇ, ಮತ್ತು ನಾಲ್ಕನೇ ಯೋಜನೆಗಳಲ್ಲಿ ಶೇ. 60 ರಷ್ಟಾಗಿತ್ತು. ಐದನೇ ಯೋಜನೆಯಲ್ಲಿ ವಿದೇಶಿ ನೆರವಿನ ಪಾಲನ್ನು ಶೇ. 60 ರಿಂದ ಶೇ. 45ಕ್ಕೆ ಇಳಿಸಲಾಯಿತು. ವಿದೇಶಿ ನೆರವಿನ ಅಂಶ ಕಡಿಮೆಯಾದಂತೆ, ಯೋಜನೆಗಳ ವೆಚ್ಚಕ್ಕೆ ಕರಕಂದಾಯಗಳಿಂದಲೇ ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ಪಡೆಯಲಾಯಿತು. ಹಳೆಯ ತೆರಿಗೆಗಳ ದರಗಳನ್ನು ಏರಿಸುವುದು, ಹೊಸ ತೆರಿಗೆಗಳನ್ನು ಹೊರಿಸುವುದು ಅವ್ಯಾಹತವಾಗಿ ನಡೆಯಿತು. ಸರಕಾರದ ಆದಾಯದ ಶೇ. 80ರಷ್ಟು ತೆರಿಗೆಗಳಿಂದಲೇ ಬರುತ್ತಿವೆ. ಅರೆ ಪಾಳೆಯಗಾರಿ – ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯ ಮಾರ್ಗದಿಂದಾಗಿ, ನೇಪಾಳದ ಆರ್ಥಿಕ ಪ್ರಗತಿ ಸ್ಥಗಿತಗೊಂಡು ಜನರು ಕರಭಾರದಿಂದ ಕಂಗೆಟ್ಟಿದ್ದಾರೆ. ಜನರ ಮೇಲೆ ತೆರಿಗೆ ವಿಧಿಸಲು ಯಾವ ರೀತಿ ನಿಯಮಗಳೂ ಇಲ್ಲಿ ಇಲ್ಲ. ತೆರಿಗೆ ಅಧಿಕಾರಿಗಳು ನಿರ್ಧರಿಸಿದಂತೆ, ಬಲಾತ್ಕಾರವಾಗಿ ತೆರಿಗೆ ವಸೂಲಿ ಮಾಡಲಾಗುತ್ತಿದೆ. ಭೂಒಡೆತನದ ಮೇಲೆಯೂ ಒಂದು ಬಿಗೆ ಭೂಮಿಗೆ ರೂ. 5 ರಿಂದ ರೂ. 81ರ ವರೆಗೆ ತೆರಿಗೆ ವಿಧಿಸಲಾಗುತ್ತಿದೆ. ವಾಹನಗಳ ಮೇಲೆ ತೆರಿಗೆ, ಅಂತರ್‌ಜಿಲ್ಲಾ ಸಾರಿಗೆಗಳ ಮೇಲೆ ತೆರಿಗೆ, ಹೀಗೆ ವಿವಿಧ ತೆರಿಗೆಗಳಿಂದ ಜನರು ಶೋಷಿಸಲ್ಪಡುತ್ತಿದ್ದಾರೆ.

ಕೂಲಿ ಕೊಡದೆ ಕೆಲಸ ಪಡೆಯುವ ಪದ್ಧತಿಯು ನೇಪಾಳದ ಜನರ ಶೋಷಣೆಯ ಇನ್ನೊಂದು ವಿಧಾನ. ರಸ್ತೆ ನಿರ್ಮಾಣ, ನೀರಾವರಿ, ಸೇತುವೆ, ಶಾಲೆ ಮತ್ತು ಪಂಚಾಯತ್ ಕಟ್ಟಡಗಳ ನಿರ್ಮಾಣ ಮುಂತಾದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಸರಕಾರದ ಧನಸಹಾಯವು ಒಂದು ಪಾಲಾದರೆ, ಶ್ರಮದಾನದಿಂದ, ಪುಕ್ಕಟೆ ದುಡಿತದಿಂದ ಆರು ಪಾಲಿನಷ್ಟು ಈ ಕಾರ್ಯಗಳ ವೆಚ್ಚವನ್ನು ನೀಗಿಸಲಾಗುತ್ತಿದೆ. ಶೋಣಿಕೆಗೆ ಪಂಚಾಯತ್ ಪದ್ಧತಿಯಲ್ಲಿ ಮಂತ್ರಿಗಳೂ, ಅಧಿಕಾರಿಗಳೂ, ಪಾಚರೂ. ಪ್ರತಿಯೊಬ್ಬರೂ ಸಾರ್ವಜನಿಕ ಕಾರ್ಯಗಳಿಗೆ ಶ್ರಮದಾನ ಮಾಡಬೇಕೆಂದಿದ್ದರೂ, ಆಚರಣೆಯಲ್ಲಿ ಬಡಜನರೂ, ಕೃಷಿಕೂಲಿಗಾರರೂ, ಬಿಟ್ಟಿ ದುಡಿಯುವ ಈ ಗುಲಾಮಗಿರಿಗೆ ಬಲಿಬೀಳಬೇಕಾಗಿದೆ. ಶ್ರೀಮಂತರೂ, ಪ್ರತಿಷ್ಠಿತರೂ ಶ್ರಮದಾನದ ಬದಲು ಧನದಾನ ಮಾಡಬಹುದೆಂದು ಅವರಿಗೆ ರಿಯಾಯಿತಿ ತೋರಿಸಲಾಗಿದೆ! ನೇಪಾಳದ ಯೋಜನಾ ಆಯೋಗದ ಉಪಾಧ್ಯಕ್ಷರಾದ ಹೆಚ್. ಪಿ. ಶ್ರೇಷ್ಠ ಅವರೇ ಈ ದಾಸ್ಯ ಪದ್ಧತಿಯನ್ನು ರದ್ದುಗೊಳಿಸಬೇಕೆಂದೂ ಕೆಲಸಕ್ಕೆ ಸರಿಯಾದ ಕೂಲಿ ಕೊಡಬೇಕೆಂದೂ ಒತ್ತಾಯಿಸಿದ್ದಾರೆ. (ಆಧಾರ : ಅರುಣ ಸಿನ್ಹ, ಇಂಡಿಯನ್ ಎಕ್ಸ್‌ಪ್ರೆಸ್ : 7-6-79).

ಅರಸೊತ್ತಿಗೆಯ ಫ್ಯಾಸಿಸ್ಟ್ ಸಂಘಟನೆಗಳು :

1960 ರಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಕೈಬಿಟ್ಟು ಮುಂದೆ 1962ರಲ್ಲಿ ಸಂವಿಧಾನಾತ್ಮಕ ಅರಸೊತ್ತಿಗೆಯನ್ನು ಅಂಗೀಕರಿಸಿದಂದಿನಿಂದ ನೇಪಾಳದ ಆರ್ಥಿಕ ಪ್ರಗತಿಯು ಸ್ಥಗಿತಗೊಂಡಿತು. ಕರಭಾರ, ನಿರುದ್ಯೋಗ ಬಡತನ ಋಣಭಾರ ಹೆಚ್ಚಿದವು. ಜನರ ಆರ್ಥಿಕ ಜೀವನ ಹದಗೆಟ್ಟಿತು. ರಾಜಕೀಯ ಪಕ್ಷಗಳೂ ಅವುಗಳ ಚಟುವಟಿಕೆಗಳೂ ನಿಶೇಧಿಸಲ್ಪಟ್ಟವು. ಪತ್ರಿಕಾ ಸ್ವಾತಂತ್ರ್ಯ ಇಲ್ಲದಾಯಿತು. ಕಾರ್ಮಿಕರು, ರೈತರು ಮತ್ತು ವಿದ್ಯಾರ್ಥಿಗಳು ತಮ್ಮ ಸಂಘಟನಾ ಸ್ವಾತಂತ್ರ್ಯ ಕಳೆದುಕೊಂಡರು. ನೇಪಾಳದ ಜನರಿಗೆ ಮೂಲಭೂತವಾದ ಪೌರಹಕ್ಕುಗಳಿಲ್ಲವಾಯಿತು. ಅರಸೊತ್ತಿಗೆಯ ಲಾಭ ಪಡೆದು ಅರಮನೆಯ ಸಮೀಪದವರು ಅಧಿಕಾರಿಗಳೂ ಕೈಗಾರಿಕೆ, ವ್ಯವಸಾಯ, ವ್ಯಾಪಾರಗಳಲ್ಲಿ ತಮ್ಮ ಸ್ವಾರ್ಥಸಾಧಿಸಿದರು. ಸಂಪತ್ತು ಗಳಿಸಿದರು. ಪರಿಣಾಮವಾಗಿ, ಅರಸೊತ್ತಿಗೆಯ ವಿರುದ್ಧ, ಶೋಷಣೆ ದಬ್ಬಾಳಿಕೆಗಳ ವಿರುದ್ಧ ಜನರಲ್ಲಿ ಅಸಂತೋಷ ಅಸಮಾಧಾನ ಅಸಹನೆಗಳು ತಾಂಡವವಾಡತೊಡಗಿದವು. ಪ್ರಜಾಸತ್ತಾತ್ಮಕ ಶಕ್ತಿಗಳು ತಲೆಎತ್ತದಂತೆ ನೋಡಿಕೊಳ್ಳಲು ರಾಜ್ಯ ಪ್ರಭುತ್ವದ ಮಿಲಿಟರಿ, ಪೋಲೀಸು, ಜೈಲುಗಳಲ್ಲದೆ, ಅರಸೊತ್ತಿಗೆಯ ಪರವಾಗಿ ಎರಡು ಫ್ಯಾಸಿಸ್ಟ್ ಸಂಘಟನೆಗಳು ನೇಪಾಳದಲ್ಲಿ ಬೆಳೆದು ಬಂದವು.

ಒಂದನೇಯದು GPRA (Gaun Pharka Rashtriya Abhiyan)ಮರಳಿ ಹಳ್ಳಿಗೆ ಎಂಬ ರಾಷ್ಟ್ರೀಯ ಆಂದೋಳನ). 1967 ರಲ್ಲಿ ದೊರೆಮಹೇಂದ್ರರು ಇದನ್ನು ಸ್ಥಾಪಿಸಿದರು. ಗ್ರಾಮೀಣ ಪ್ರದೇಶಗಳ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸುವುದು' ಮತ್ತು "ಪಕ್ಷಾತೀತ ಪಂಚಾಯತು ಪ್ರಜಾಪ್ರಭುತ್ವ"ವನ್ನು ಜನಪ್ರಿಯಗೊಳಿಸುವುದು ಈ ಸಂಘಟನೆಯ ಮುಖ್ಯ ಉದ್ದೇಶಗಳು. ಆದರೆ ಈ ದಿಸೆಯಲ್ಲಿ ಇದರ ಸಾಧನೆಯು ಅತ್ಯಲ್ಪ. 1972ರಲ್ಲಿ ದೊರೆ ಬೀರೇಂದ್ರರು ಅಧಿಕಾರಕ್ಕೆ ಬಂದಂದಿನಿಂದ ಈ ಸಂಘಟನೆಯು ಪ್ರಜಾಸತ್ತಾತ್ಮಕ ವಿರೋಧಿ ಶಕ್ತಿಗಳನ್ನು ಹತ್ತಿಕ್ಕುವುದರಲ್ಲಿಯೇ ನಿರತವಾಗಿದೆ. ಸಾರ್ವಜನಿಕ ಕೆಲಸಕಾರ್ಯಗಳಿಗೆ ಬಡಜನರಿಂದ ಪುಕ್ಕಟೆ ದುಡಿಸುವ ಗುಲಾಮಗಿರಿಯ ಮುಂದಾಳುತನವನ್ನು ಇದು ವಹಿಸಿದೆ. ಇದರ 'ಧರ್ಮಾಂಧತೆ ಹಾಗೂ ಅರಸೊತ್ತಿಗೆಯ ಮೇಲಿನ ಅಭಿಮಾನ ಮತ್ತಿತರ ಕಾರ್ಯ ಚಟುವಟಿಕೆಗಳು ಭಾರತದ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ (RSS) ಧ್ಯೇಯ ಧೋರಣೆಗಳನ್ನೇ ಹೋಲುತ್ತವೆ. ಅರಸನು ದೇವಾಂಶ ಸಂಭೂತನೆಂದೂ ಈ ಸಂಘಟನೆಯು ಜನರಲ್ಲಿ ಪ್ರಚಾರ ಮಾಡುತ್ತಿದೆ!

ಎರಡನೆಯ ಸಂಘಟನೆಯು RSVM. (Rashtriya Swatantra Vidyarthi Mandal ರಾಷ್ಟ್ರೀಯ ಸ್ವಯಂ ಸೇವಕ ವಿದ್ಯಾರ್ಥಿ ಮಂಡಲಿ) ಇದನ್ನು ದೊರೆಮಹೇಂದ್ರರೇ ಹತ್ತು ವರ್ಷಗಳ ಹಿಂದೆ ಸ್ಥಾಪಿಸಿದರು. ನಿರುದ್ಯೋಗಿ ಯುವ ಜನರೂ ಅತೃಪ್ತ ವಿದ್ಯಾರ್ಥಿಗಳೂ ಇದರಲ್ಲಿ ಸೇರ್ಪಡೆಗೊಂಡರು. ಈ ಸಂಘಟನೆಯು ಭಾರತದಲ್ಲಿ ತುರ್ತುಪರಿಸ್ಥಿತಿಯಲ್ಲಿ ಹುಟ್ಟಿಕೊಂಡ ಸಂಜಯ ಗಾಂಧಿಯ ಯುವ ಕಾಂಗ್ರೆಸಿಗೆ ಹೋಲುತ್ತದೆ. ಆದರೆ ಮೇಲಿನ ಎರಡೂ ಸಂಘಟನೆಗಳು ಸರಕಾರದ ವೆಚ್ಚದಿಂದಲೇ ನಡೆಸಲ್ಪಡುತ್ತವೆ. ಅವುಗಳ ಕಾರ್ಯಕರ್ತರ ಸಂಬಳ ಮತ್ತು ಕಛೇರಿಗಳ ವೆಚ್ಚಗಳನ್ನು ಸರಕಾರವೇ ನೋಡಿಕೊಳ್ಳುವುದು. ಅಗತ್ಯವಿದ್ದರೆ ಆದಕ್ಕಾಗಿ ಜಿಲ್ಲಾಧಿಕಾರಿಗಳ ಮೂಲಕ ಜನರಿಂದ ಬಲಾತ್ಕಾರವಾಗಿ ವಂತಿಗೆ ವಸೂಲಿ ಮಾಡಲಾಗುವುದು. ಮೇಲಾಗಿ ವಿದ್ಯಾರ್ಥಿ ಮಂಡಳಿ ಕಾರ್ಯಕರ್ತರೆಲ್ಲರಿಗೂ ಶಸ್ತ್ರಧಾರಿಗಳಾಗಿರಲು ಸರಕಾರ ಸಮ್ಮತಿ ನೀಡಿದೆ. ಈ ಸಂಘಟನೆಯ ಮುಖ್ಯ ಉದ್ದೇಶ ಪ್ರಜಾಸತ್ತಾತ್ಮಕ ಹಾಗೂ ಎಡಪಕ್ಷದ ವಿದ್ಯಾರ್ಥಿ ಸಂಘಟನೆಗಳನ್ನು ಮುರಿಯುವುದಾಗಿದೆ. ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಸಮಸ್ಯೆಗಳ ಕುರಿತು ಸಂಬಂಧಪಟ್ಟವರಿಗೆ ಮನವಿ ಸಲ್ಲಿಸುವುದನ್ನೂ, ತರಗತಿಗಳನ್ನು ಬಹಿಷ್ಕರಿಸುವುದನ್ನೂ ಇದರ ಕಾರ್ಯಕರ್ತರು ಸಹಿಸುವುದಿಲ್ಲ. ಅವರು ಅಂತಹ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಮೇಲೆ ಸಶಸ್ತ್ರಧಾಳಿ ನಡೆಸಿ, ಅವರನ್ನು ಬಲಾತ್ಕಾರವಾಗಿ ತರಗತಿಗಳಿಗೆ ದಬ್ಬುತ್ತಾರೆ.

ಕಳೆದ ಫೆಬ್ರವರಿಯಲ್ಲಿ ಕೊಯಿರಾಲರು ಅಮೇರಿಕದಿಂದ ಸ್ವದೇಶಕ್ಕೆ ಮರಳಿ ಬಂದಾಗ ಇದರ ಕಾರ್ಯಕರ್ತರು ಕರಿಬಾವುಟಗಳ ಮತಪ್ರದರ್ಶನ ಮಾಡಿದರು. ಅವರ ವಿಮಾನವು ಅವರ ಹುಟ್ಟೂರಿನಲ್ಲಿಯೂ ಇಳಿಯದಂತೆ ಮಾಡಿದರು. 1975ರ ಯಶಸ್ವೀ ವಿದ್ಯಾರ್ಥಿ ಚಳುವಳಿಯನು ಹತ್ತಿಕ್ಕಲು ಸೋತು, ವಿದ್ಯಾರ್ಥಿಗಳ ಬೇಡಿಕೆಗಳೆಲ್ಲವನ್ನೂ ಈಡೇರಿಸಿಕೊಡುವ ಒಪ್ಪಂದವಾದ ಮೇಲೆ ಇದರ ಕಾರ್ಯಕರ್ತರು ಉದ್ದೇಶಪೂರ್ವಕವಾಗಿ ಹಿಂಸಾತ್ಮಕ ಗಲಭೆ ಎಬ್ಬಿಸಿ ವಿದ್ಯಾರ್ಥಿಗಳು ಶಾಂತಿಪಾಲನೆ ಮಾಡಲಿಲ್ಲ ಎಂಬ ನೆವದಿಂದ ಅವರ ಯಾವ ಬೇಡಿಕೆಗಳನ್ನೂ ಈಡೇರಿಸದಂತೆ ಪಿತೂರಿ ಹೂಡಿದರು. ಕಳೆದ ವರ್ಷ ಕಮ್ಯೂನಿಸ್ಟ್ ನಾಯಕ ಪುಷ್ಪಲಾಲ್ ಶ್ರೇಷ್ಠರ ಚಿತಾಭಸ್ಮವನ್ನು ಡಿಲ್ಲಿಯಿಂದ ಕಾಠಮಂಡಿಗೆ ತಂದಾಗ ಅದನ್ನು ಇದಿರುಗೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ವಿಮಾನ ನಿಲ್ದಾಣದಲ್ಲಿ ಸೇರಿರುವುದನ್ನು ರಾಜದ್ರೋಹಿ ರಾಜಕೀಯ ಚಟುವಟಿಕೆ ಎಂದು ಈ ಎರಡು ಫ್ಯಾಸಿಸ್ಟ್ ಸಂಘಟನೆಗಳು ಪರಿಗಣಿಸಿ ಪ್ರತೀಕಾರಕ್ಕಾಗಿ ಕತ್ತಿ ಮಸೆಯುತ್ತಿದ್ದವು.

ಹೊಸ ಹೋರಾಟ, ಹೊಸ ತಿರುವು:

ನೇಪಾಳದ ಕಾಂಗ್ರೆಸ್‌ನ ನಾಯಕ ಹಾಗೂ ಮಾಜಿ ಪ್ರಧಾನಿ ಕೊಯಿರಾಲರು ಅಮೇರಿಕದಿಂದ ಕಳೆದ ಫೆಬ್ರವರಿಯಲ್ಲಿ ಸ್ವದೇಶಕ್ಕೆ ಮರಳಿ ಬಂದಾಗ, ಸರಕಾರಿ ಪ್ರಚೋದಿತ ಮತಪ್ರದರ್ಶನಗಳನ್ನು ನಡೆಸಲಾಯಿತು. ಮುಂದೆ, ರಾಜದ್ರೋಹ ಅಪರಾಧಕ್ಕಾಗಿ ಮರಣದಂಡನೆ ವಿಧಿಸಲ್ಪಟ್ಟು ಸೆರೆಮನೆಯಲ್ಲಿದ್ದ ಕೊಯಿರಾಲರ ಇಬ್ಬರು ಸಹೋದ್ಯೋಗಿಗಳನ್ನು ಗುಂಡಿಟ್ಟು ಕೊಲ್ಲಲಾಯಿತು. ಅವರಿಬ್ಬರ ಕ್ಷಮಾಯಾಚನೆಯ ಮನವಿಗಳನ್ನು ದೊರೆ ಬೀರೇಂದ್ರರು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದರು. ಕೊಯಿರಾಲರು ಸ್ವದೇಶಕ್ಕೆ ಮರಳುವಾಗ ಹೊಸ ಆಂದೋಳನ ಸಧ್ಯ ಅಗತ್ಯವಿಲ್ಲ ಎಂದೂ ಅರಸೊತ್ತಿಗೆಯೊಂದಿಗೆ ತಾನು ರಾಷ್ಟ್ರೀಯ ಸಂಧಾನಕ್ಕೆ ಸಿದ್ಧನಿರುವುದಾಗಿಯೂ ಸ್ಪಷ್ಟಪಡಿಸಿದ್ದರು. ಆದರೆ, ಪ್ರಜಾಸತ್ತಾತ್ಮಕ ಆಂದೋಳನದ ವಿರುದ್ಧ ಸರಕಾರ ತನ್ನ ಧೃಢ ನಿಲುಮೆಯನ್ನು ಪ್ರದರ್ಶಿಸಲು ಮೇಲಿನ ಕಠಿಣ ಕ್ರಮಗಳನ್ನು ಕೈಗೊಂಡಿತು.

ಇದರಿಂದ ದೊಡ್ಡ ಪ್ರಮಾದವೇ ಉಂಟಾಯಿತು. ಸರಕಾರದ ಧೃಢ ನಿಲುಮೆಯ ಪ್ರದರ್ಶನವು ವಿದ್ಯಾರ್ಥಿಗಳ ಮತ್ತು ಕಾರ್ಮಿಕರ ಹಾಗೂ ರೈತರ ವ್ಯಾಪಕ ಆಂದೋಳನಕ್ಕೆ ನಾಂದಿಯಾಯಿತು. ಕೊಯಿರಾಲರ ರಾಜಿ ಧೋರಣೆಯ ನಾಯಕತ್ವವನ್ನು ಅವರ ಪಕ್ಷದ ಒಳಗೂ ಹೊರಗೂ ಪ್ರಶ್ನಿಸುವ ಪರಿಸ್ಥಿತಿ ಉಂಟಾಯಿತು. ಇದುವರೆಗೆ ಬೂದಿ ಮುಚ್ಚಿದ ಕೆಂಡದಂತಿದ್ದ ಕಾಂಗ್ರೆಸ್ ಮತ್ತು ಇತರ ಎಡ ಪಕ್ಷಗಳು (ವಿವಿಧ ಪಂಗಡಗಳ ಕಮ್ಯೂನಿಸ್ಟ್ ಪಕ್ಷಗಳು) ರಾಜಕೀಯ ಚಟುವಟಿಕೆಗಳು ಚುರುಕುಗೊಂಡವು. ಅರಸೊತ್ತಿಗೆ.

[6ನೇ ಪುಟ ನೋಡಿ]

ಲೆನಿನ್ನರ ಅತ್ಯದ್ಭುತ ಶಿಷ್ಯ - ಸ್ಟಾಲಿನ್

—ಬಿ.ಟಿ. ರಣದಿವೆ

ಸ್ಟಾಲಿನ್ನರ ಜನ್ಮದ ಶತಮಾನೋತ್ಸವ ವರ್ಷದಲ್ಲಿ ಮಹಾನ್ ಬೋಲ್ಷೆವಿಕ್ ಆಗಿದ್ದ ಕಾಮ್ರೇಡ್ ಕಿರೋವ್ ಅವರು 1933 ರಲ್ಲಿ ಹೇಳಿದ್ದ ಮಾತುಗಳು ನೆನಪಿಗೆ ಬರುತ್ತವೆ. "ಸ್ಟಾಲಿನ್‌ರ ವ್ಯಕ್ತಿತ್ವವನ್ನು ಅದರ ಎಲ್ಲ ಬೃಹತ್ ಪ್ರಮಾಣಗಳಲ್ಲಿ ಗ್ರಹಿಸುವುದು ಸುಲಭವಲ್ಲ.' ಲೆನಿನ್ ಇಲ್ಲದೆ ನಮ್ಮ ಕೆಲಸಕಾರ್ಯಗಳನ್ನು ನಡೆಸಬೇಕಾಗಿರುವ ಈ ವರ್ಷಗಳಲ್ಲಿ, ಕಾಮ್ರೇಡ್ ಸ್ಟಾಲಿನ್ ರೂಪಿಸದಿರುವ ಯಾವುದೇ ದುಡಿಮೆಯ ದೊಡ್ಡ ಅಭಿವೃದ್ಧಿ ಆಗಿಲ್ಲ. ಅವರು ರೂಪಿಸದಿರುವ ಹೊಸ ಕೈಗಾರಿಕೆಗಳಿಲ್ಲ, ಘೋಷಣೆಯಿಲ್ಲ ಅಥವಾ ಪ್ರಮುಖವಾದ ನೀತಿಯ ಧೋರಣೆಯೂ ಇಲ್ಲ. ಎಲ್ಲ ಪ್ರಮುಖ ಕೆಲಸಗಳೂ ಕಾಮ್ರೇಡ್ ಸ್ಟಾಲಿನ್ನರ ಆದೇಶಗಳು, ಉತ್ಸಾಹ ಮತ್ತು ಮಾರ್ಗದರ್ಶನದಡಿಯಲ್ಲೇ ನಡೆದಿವೆ ಎಂಬುದನ್ನು ಪಕ್ಷವು ತಿಳಿದಿರಬೇಕು......ಸಮಾಜವಾದವನ್ನು ಸಫಲವಾಗಿ ಕಟ್ಟುವುದಕ್ಕೆ ಸಂಬಂಧಿಸಿದ ಎಲ್ಲ ದೊಡ್ಡ ಚಾರಿತ್ರಿಕ ಬದಲಾವಣೆಗಳನ್ನು ನಮ್ಮ ಪಕ್ಷವು ತರುವುದರಲ್ಲಿ ಈ ಮನುಷ್ಯನ ಸಶಕ್ತ ಮನಸ್ಸು ಮತ್ತು ಸಂಘಟನಾ ಚಾತುರ್ಯಗಳು ಸಹಾಯ ಮಾಡುತ್ತವೆ."

ಸ್ಟಾಲಿನ್‌ರ ದೂಷಕರು ಅವರ ಕೆಲವು ತಪ್ಪುಗಳನ್ನೇ ಮುಂದುಮಾಡಿ ಅವರ ವ್ಯಕ್ತಿತ್ವಕ್ಕೆ ಸಾಕಷ್ಟು ಮಸಿಬಳಿದಿದ್ದಾರೆ. ಆ ಮೂಲಕ, ಕಾರ್ಮಿಕ ವರ್ಗದ ಶತ್ರುಗಳು ಮತ್ತು ಸಾಮ್ರಾಜ್ಯವಾದಿಗಳು, ಸಮಾಜವಾದದಲ್ಲಿ, ಕ್ರಾಂತಿಯಲ್ಲಿ. ಮತ್ತು ಮಾರ್ಕ್ಸ್‌ವಾದಿ ಲೆನಿನ್‌ವಾದಿ ಪಕ್ಷದ ನೇತೃತ್ವದಲ್ಲಿ ಜನತೆಗೆ ಇರುವ ವಿಶ್ವಾಸವನ್ನು ತಗ್ಗಿಸುವುದರಲ್ಲಿ ಸಹಾಯ ಮಾಡಿದ್ದಾರೆ. ಆದರೆ ಅವರ ಪ್ರಯತ್ನಗಳು ನಿಷ್ಫಲವಾಗಿವೆ. ಮಾರ್ಕ್ಸ್‌ವಾದ ಲೆನಿನ್‌ವಾದದ ಈ ಪ್ರತಿಭಾವಂತನ ಬಗ್ಗೆ, ಸಮಾಜವಾದ ಮತ್ತು ಅಂತರರಾಷ್ಟ್ರೀಯ ಸಮತಾವಾದದ ಕಾರಣಕ್ಕಾಗಿ ದುಡಿದ ಈ ಹೋರಾಟಗಾರನ ಬಗ್ಗೆ, ಹೋರಾಡುವ ಕಾರ್ಮಿಕವರ್ಗಕ್ಕೆ ಇರುವ ಭಾವನೆಗಳು ಮತ್ತು ಕೃತಜ್ಞತೆಯನ್ನು ಕಿರೋವ್ ಅವರ ಮಾತುಗಳು ಪ್ರತಿನಿಧಿಸುತ್ತವೆ.

ಜಗತ್ತಿಗೆ ಲೆನಿನ್ನರ ಕಾಣಿಕೆ :

ಲೆನಿನ್ನರಿಗೆ ಶ್ರದ್ಧಾಂಜಲಿ ಅರ್ಪಿಸುವಾಗ ಸೋವಿಯೆತ್ ಪಷ್ಯನ್ ಕವಿಯೊಬ್ಬರು ಚಾರಿತ್ರಿಕ ಸತ್ಯವನ್ನೇ ಹೇಳಿದ್ದಾರೆ-ಸ್ಟಾಲಿನ್ನರು ಲೆನಿನ್ ಜಗತ್ತಿಗಿತ್ತ ಕಾಣಿಕೆ ಎಂದು ಅವರು ವರ್ಣಿಸುತ್ತಾರೆ.

"And no one can or dares
to say you are dead
The foe even if he is brave
must admit and cower
Dead is he that thinks you
to be dead
Because immortal is the
gaint that gave the world
The power of Bolshevik
Party and Stalin"

ಹೌದು, ಸ್ಟಾಲಿನ್‌ರು ಲೆನಿನ್ನರ ಕಾಣಿಕೆಯೇ. ಅವರು ಲೆನಿನ್‌ರ ಅತಿದೃಢ ಮತ್ತು ಪ್ರಾಮಾಣಿಕ ಶಿಷ್ಯರಾಗಿದ್ದರು. ಲೆನಿನ್ನರ ಬೋಧನೆಯನ್ನು ಲೆನಿನ್‌ವಾದ ಎಂದು, ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿ ಕ್ರಾಂತಿಗಳ ಯುಗದ ಮಾರ್ಕ್ಸ್‌ವಾದ ಎಂದು ಅರ್ಥೈಸಿ, ಲೆನಿನ್‌ವಾದದ ಆಳವಾದ ತಿಳುವಳಿಕೆಯ ಆಧಾರದ ಮೇಲೆ, ಕ್ರಾಂತಿಯ ಸಿದ್ಧಾಂತ ಮತ್ತು ಕಾರ್ಯಾಚರಣೆಗೆ ತಮ್ಮದೇ ಆದ ಚಾರಿತ್ರಿಕ ಕೊಡುಗೆಗಳನ್ನು ನೀಡಬಲ್ಲವರಾಗಿದ್ದರು.

ಮಾರ್ಕ್ಸ್ ಮತ್ತು ಎಂಗೆಲ್ಸರ ಕಾಲದಲ್ಲಿ, ಮಾರ್ಕ್ಸ್‌ವಾದವನ್ನು ಸಮಾಜವಾದಿ ಕ್ರಾಂತಿಯ ತತ್ವ ಎಂಬುದಾಗಿ ಅರ್ಥೈಸಿಕೊಳ್ಳುವುದರಲ್ಲಿ ವಿಫಲರಾದವರು. ಪರಿಷ್ಕರಣವಾದ ಮತ್ತು ಸುಧಾರಣಾವಾದದ ಕೂಪಕ್ಕೆ ಬಿದ್ದರು. ನಂತರದ ಸಾಮ್ರಾಜ್ಯಶಾಹಿ ಮತ್ತು ಸಮಾಜವಾದಿ ಕ್ರಾಂತಿಗಳ ಆರಂಭದ ಯುಗದಲ್ಲಿ, ಲೆನಿನ್‌ವಾದವೇ ಆ ಅವಧಿಯ ಮಾರ್ಕ್ಸ್‌ವಾದ ಎಂದು ಲೆನಿನ್‌ರ ಬೋಧನೆಗಳನ್ನು ಅರ್ಥೈಸಿಕೊಳ್ಳುವುದರಲ್ಲಿ ವಿಫಲರಾದವರೂ ಕೂಡ ಪರಿಷ್ಕರಣವಾದ ಮತ್ತು ಸುಧಾರಣಾವಾದಗಳಿಗೆ ಬಲಿಯಾದರು. ಸ್ಟಾಲಿನ್‌ರು ಅಂತರರಾಷ್ಟ್ರೀಯ ದುಡಿಯುವವರ್ಗದ ಕ್ರಾಂತಿಕಾರಿ ಚಳುವಳಿಗೆ ದೃಢವಾದ ಮಾರ್ಗದರ್ಶನ ನೀಡಿದರು. ಏಕೆಂದರೆ, ಲೆನಿನ್‌ವಾದದ ಬೋಧನೆಗಳ ಬಗ್ಗೆ ಹಿಂಜರಿಯುತ್ತಿದ್ದ, ಹೊಯ್ದಾಡುತ್ತಿದ್ದ ಮತ್ತು ಅನೇಕ ವೇಳೆ ಅವನ್ನು ಮೀರುತ್ತಿದ್ದ ಅವರ ಅನೇಕ ಸಹೋದ್ಯೋಗಿಗಳ ಹಾಗಿರದೆ ಸ್ಟಾಲಿನ್‌ರು ಮಾರ್ಕ್ಸ್‌ವಾದ-ಲೆನಿನ್‌ವಾದದ ಧ್ವಜವನ್ನು ಬಲವಾಗಿ ಹಿಡಿದಿದ್ದರು.

ಲೆನಿನ'ವಾದದಲ್ಲಿ ದೃಢ ನಂಬಿಕೆ:

ಕ್ರಾಂತಿಗಳನ್ನು ಜನತೆಯೇ ಮಾಡುತ್ತಾರೆಂದು ಮಾರ್ಕ್ಸ್‌ವಾದ-ಲೆನಿನ್‌ವಾದ ಬೋಧಿಸುತ್ತದೆ. ಜನತೆಗೆ ಯಾವ ಪಾತ್ರವೂ ಇಲ್ಲದೆ, ಕ್ರಾಂತಿಗಳು ಮತ್ತು ಸಾಮಾಜಿಕ ಬದಲಾವಣೆಗಳು ಮಹಾನ್ ವ್ಯಕ್ತಿಗಳ ಕೈಕೆಲಸ ಎಂದಾಗಲಿ ಅಥವಾ ಸಾಮಾಜಿಕ ಬದಲಾವಣೆಗೆ ಸೂಕ್ತವಾದ ಸಾಮಾಜಿಕ ಸ್ಥಿತಿಗತಿಗಳು ಇಲ್ಲದಿದ್ದರೂ ಮಹಾನ್ ವ್ಯಕ್ತಿಗಳು ತಮ್ಮ ಸ್ಫೂರ್ತಿಯ ಮಾರ್ಗದರ್ಶನದಲ್ಲಿ ಬದಲಾವಣೆ ಸಾಧಿಸಬಲ್ಲರು ಎಂದಾಗಲಿ ಮಾರ್ಕ್ಸ್‌ವಾದ-ಲೆನಿನ್‌ವಾದ ಹೇಳುವುದಿಲ್ಲ.

ಕಾರ್ಮಿಕವರ್ಗದ ಸಮಾಜವಾದಿ ಕ್ರಾಂತಿ ನಡೆಯಬೇಕಾದರೆ ಸಮತಾವಾದಿ ಪಕ್ಷದ ನೇತೃತ್ವವೂ ಅತ್ಯಗತ್ಯ ಎಂದು ಮಾರ್ಕ್ಸ್‌ವಾದ-ಲೆನಿನ್‌ವಾದ ಹೇಳುತ್ತದೆ. ಇದಿಲ್ಲದಿದ್ದರೆ ಕಾರ್ಮಿಕವರ್ಗ ತನ್ನ ಧ್ಯೇಯವನ್ನು ಸಾಧಿಸುವುದಕ್ಕೆ ಆಗುವುದಿಲ್ಲ. ಮಾರ್ಕ್ಸ್‌ವಾದ-ಲೆನಿನ್‌ವಾದದ ಆಳವಾದ ತಿಳುವಳಿಕೆಯ ಆಧಾರದ ಮೇಲೆ ನಿಂತಿರುವ ಪಕ್ಷ ಇಲ್ಲದಿದ್ದರೆ, ಕ್ರಾಂತಿಕಾರಿ ಮನಸ್ಸಿನಿಂದ ಜೊತೆಗೂಡಿದ ಉಕ್ಕುಸದೃಶ ನಿರ್ಧಾರದ ಪಕ್ಷ ಇಲ್ಲದಿದ್ದರೆ, ಒಂದು ಸಫಲಕ್ರಾಂತಿಯನ್ನು ನಡೆಸಲಾಗುವುದಿಲ್ಲ. ಅಲ್ಲದೆ ಅದರ ಸಾಧನೆಗಳನ್ನು ದೃಢಪಡಿಸಲೂ ಆಗುವುದಿಲ್ಲ.

ಆದರೂ ಸಮಾಜವಾದಿ ಕ್ರಾಂತಿಯ ಯುಗವೂ ಸೇರಿದಂತೆ ಎಲ್ಲ ಯುಗಗಳಲ್ಲೂ ವ್ಯಕ್ತಿಗಳು ತಮ್ಮ ಚಾರಿತ್ರಿಕ ಕೊಡುಗೆಗಳನ್ನು ನೀಡಬಹುದು ಮತ್ತು ಮಹಾನ್ ವ್ಯಕ್ತಿಗಳು ಚಾರಿತ್ರಿಕ ಪಾತ್ರವನ್ನು ನಿರ್ವಹಿಸಬಹುದು ಎಂದೂ ಅದು ಹೇಳುತ್ತದೆ.

ಆಧುನಿಕ ಯುಗದಲ್ಲಿ, ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಆಳವಾಗಿ ಅರ್ಥೈಸಿಕೊಂಡಿರುವ ಮತ್ತು ಬದಲಾಗುತ್ತಿರುವ ದಿನನಿತ್ಯದ ಪರಿಸ್ಥಿತಿಯನ್ನು ಸರಿಯಾಗಿ ನಿಷ್ಕರಿಸುವ ವ್ಯಕ್ತಿಗಳು ಮಾತ್ರ ಮಹತ್ವದ ಪಾತ್ರವನ್ನು ವಹಿಸಬಹುದು. ಪ್ರಸ್ತುತ ಪರಿಸ್ಥಿತಿಯನ್ನು ಸರಿಯಾಗಿ ಅರ್ಥೈಸಿದ್ದರಿಂದ ಮತ್ತು ಈ ಕಾಲದ ಸಮಸ್ಯೆಗಳ ನಿವಾರಣೆಗೆ ಮಾರ್ಕ್ಸ್‌ವಾದ - ಲೆನಿನ್‌ವಾದವನ್ನು ಸರಿಯಾಗಿ ಅನ್ವಯಿಸುವುದರಲ್ಲಿ ಸಫಲರಾಗಿದ್ದರಿಂದ ಸ್ಟಾಲಿನ್ ಅತ್ಯದ್ಭುತ ಕೊಡುಗೆಯನ್ನು ನೀಡಲು ಸಾಧ್ಯವಾಯಿತು ಮತ್ತು ಇತರರಿಗಿಂತ ಎತ್ತರದಲ್ಲಿ ನಿಲ್ಲುವಂತಾಯಿತು.

ಶತಮಾನೋತ್ಸವ ವರ್ಷ

ಸಾಮ್ರಾಜ್ಯಶಾಹಿಯ ಸಮಾಜವಾದಿ ಕ್ರಾಂತಿಗಳ ಹಿನ್ನೆಲೆ ಎಂಬ ವಿವರಣೆ, ಪಕ್ಷದ ಪಾತ್ರ, ಕಾರ್ಮಿಕವರ್ಗದ ಸರ್ವಾಧಿಕಾರದ ಅಗತ್ಯ, ಕಾರ್ಮಿಕ ಅಂತರರಾಷ್ಟ್ರೀಯತೆ ಮತ್ತು ವಿಶ್ವಕಾರ್ಮಿಕ ಹೋರಾಟದೊಂದಿಗೆ ವಸಾಹತು ಬಿಡುಗಡೆಯ ಹೋರಾಟದ ಜೋಡಣೆ, ಒಂದು ದೇಶದಲ್ಲಿ ಸಮಾಜವಾದ ಸ್ಥಾಪನೆಯ ಸಾಧ್ಯತೆ-ಇಂತಹ ಲೆನಿನ್‌ರ ಕೊಡುಗೆಗಳನ್ನು ಸ್ಟಾಲಿನ್ ದೃಢವಾಗಿ ಬೆಂಬಲಿಸಿದರು. ಆದ್ದರಿಂದಲೇ 20ನೇ ಶತಮಾನದ ಮಹಾನ್ ಕ್ರಾಂತಿಕಾರಿಗಳಲ್ಲಿ ಒಬ್ಬರಾಗಿ. ಲೆನಿನ್‌ನ ಮರಣಾ ನಂತರ ಎಲ್ಲರಿಗಿಂತ ಮಿಗಿಲಾಗಿ ವಿಶ್ವದ ಹಣೆಬರಹವನ್ನು ರೂಪಿಸಿದ, ಅದರ ಚಾರಿತ್ರಿಕ ಘಟನೆಗಳನ್ನು ರೂಪಿಸಿದ ವ್ಯಕ್ತಿಯಾಗಿ ನಿಂತರು.

ಪ್ರತಿಭಟನಾ ಚೇತನ :

ಸ್ಟಾಲಿನ್ ಒಂದು ಬಡ ಕಾರ್ಮಿಕ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ವಿಸ್ಸಾರಿಯನ್ ಒಬ್ಬ ಮೋಚಿಯಾಗಿದ್ದು, ಮನೆಯಲ್ಲಿ ಚಪ್ಪಲಿ ಹೊಲೆದು, ಕೆಲವೊಮ್ಮೆ ಹತ್ತಿರದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ತಾಯಿ ಅಗಸಗಿತ್ತಿಯಾಗಿ ಕೆಲಸ ಮಾಡುತ್ತಿದ್ದರು. ಬಡತನದಲ್ಲಿದ್ದರೂ ಸಹ ಸ್ಟಾಲಿನ್‌ರ ತಂದೆ ತಾಯಿಗಳು ಮಗನನ್ನು ಗೋರಿ ಕ್ರೈಸ್ತ ಮತೀಯ ಶಾಲೆಗೆ ಕಳುಹಿಸಲು ಶಕ್ತರಾದರು.

ಪ್ರಶ್ನಾತೀತ ವಿಧೇಯತೆಯನ್ನು ಬಯಸುತ್ತಿದ್ದ ಶಾಲಾ ಅಧಿಕಾರಿಗಳನ್ನು ವಿರೋಧಿಸುತ್ತಿದ್ದುದರಿಂದ ಮತ್ತು "ಶಿಸ್ತ"ನ್ನು ಮೀರಿದ್ದರಿಂದ ಅವರಿಗೆ ಪದೇಪದೇ ಶಿಕ್ಷೆಯಾಗುತ್ತಿತ್ತು. ಹಳೆಯ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸ್ಟಾಲಿನ್‌ಗೆ ಇದ್ದ ಪ್ರತಿಭಟನಾ ಚೇತನ ಅವರ ಶಾಲಾದಿನಗಳಿಂದಲೇ ವ್ಯಕ್ತವಾಗುತ್ತದೆ.

ಪ್ರಗತಿಪಾದಿ ಸಾಹಿತ್ಯದೊಂದಿಗೆ, ನಂತರ ಮಾರ್ಕ್ಸ್‌ವಾದಿ ಸಾಹಿತ್ಯದೊಂದಿಗೆ ಸ್ಟಾಲಿನ್ ಪರಿಚಯ ಬೆಳೆಸಿಕೊಂಡು ದಿನೇದಿನೇ ಅವುಗಳಿಂದ ಆಕರ್ಷಿತರಾದರು. ಈ ಸಾಹಿತ್ಯ "ಬುಡಮೇಲು ಮಾಡುವಂಥ" ಸಾಹಿತ್ಯ ಎಂದು ಧಾರ್ಮಿಕ ಅಧಿಕಾರಿಗಳು ಭಾವಿಸಿ ವಿದ್ಯಾರ್ಥಿಗಳು ಇದನ್ನು ಓದದಂತೆ ತಡೆಯೊಡ್ಡುತ್ತಿದ್ದರು. ಕ್ರೈಸ್ತ ಮಠದ ಅಧಿಕಾರಿಗಳು ವಿದ್ಯಾರ್ಥಿಗಳ ಬಗ್ಗೆ ಪದೇಪದೇ ಗೂಢಚರ್ಯೆ ನಡೆಸುವ ಪದ್ಧತಿ ಇಟ್ಟುಕೊಂಡಿದ್ದು. ಈ ಬುಡಮೇಲು ಮಾಡುವಂಥ ಸಾಹಿತ್ಯವನ್ನು ಮುಟ್ಟುಗೋಲು ಹಾಕಿಕೊಳ್ಳಲು ಶೋಧ ನಡೆಸುತ್ತಿದ್ದರು. 'ಮನಸ್ಸಿಗೆ ಚುಚ್ಚುವಂಥ ಆಡಳಿತ ಮತ್ತು ಕ್ರೈಸ್ತಮತೀಯ ವಿಧಾನಗಳ ವಿರುದ್ಧ ಪ್ರತಿಭಟಿಸುವ ಸಲುವಾಗಿ ನಾನು ಕ್ರಾಂತಿಕಾರಿ ಆಗಲು ಸಿದ್ಧನಿದ್ದೆ ಮತ್ತು ಕ್ರಮೇಣ ಹಾಗೆಯೇ ಆದೆ" ಎಂದು ಸ್ಟಾಲಿನ್ ತಮ್ಮ ನಂತರದ ಜೀವನದಲ್ಲಿ ಹೇಳಿಕೊಳ್ಳುತ್ತಿದ್ದರು.

ತಾತ್ವಿಕ ಕ್ರೈಸ್ತಮಠದ ಶೀಲಪುಸ್ತಕದಲ್ಲಿ ಸ್ಟಾಲಿನ್ ಬಗ್ಗೆ ಇದ್ದ ಈ ಮಾತುಗಳನ್ನು ಅವರ ಜೀವನ ಚರಿತ್ರಕಾರರಲ್ಲೊಬ್ಬರಾದ ಇ. ಯರೋಸ್ಲಾವ್‌ಸ್ಕಿ ಉಲ್ಲೇಖಿಸುತ್ತಾರೆ—"ಕೀಳು ಪುಸ್ತಕಾಲಯದ ಟಿಕೆಟ್ಟನ್ನು ಜುಗಾಶ್ವಿಲ್ಲಿ ಹೊಂದಿರುವಂತೆ ಕಾಣುತ್ತದೆ. ಅದರಿಂದ ಅವನು ಪುಸ್ತಕಗಳನ್ನೂ ತರುತ್ತಾನೆ. ಈ ದಿನ ನಾನು ವಿಕ್ಟರ್ ಹ್ಯೂಗೋನ ಸಮುದ್ರದ ಶ್ರಮಜೀವಿಗಳು ಪುಸ್ತಕವನ್ನು ವಶಪಡಿಸಿಕೊಂಡೆ. ಅದರಲ್ಲಿ ಈ ಟಿಕೆಟ್ ಇತ್ತು...ನವೆಂಬರ್ 1896". ಉಪ ಮೇಲ್ವಿಚಾರಕರಾದ ಅದೇ ಎಸ್. ಮುರಕೋವ್‌ಸ್ಕಿ ಇನ್ನೊಂದು ಕಡೆ ಬರೆದಿದ್ದಾರೆ- "ಕೀಳು ಪುಸ್ತಕಾಲಯದಿಂದ ತರಲ್ಪಟ್ಟ ಲಿಟೋರ್ನಿಯನ್‌ನ ದೇಶಗಳ ಸಾಹಿತ್ಯಕ ವಿಕಸನ ಪುಸ್ತಕವನ್ನು ಇದು ರಾತ್ರಿ ಹನ್ನೊಂದು ಗಂಟೆಗೆ ಜೋಸೆಫ್ ಜುಗಾಶ್ವಿಲ್ಲಿಯಿಂದ ವಶಪಡಿಸಿಕೊಂಡೆ. ಪುಸ್ತಕದೊಳಗೆ ಪುಸ್ತಕಾಲಯದ ಟಿಕೆಟ್ ಸಿಕ್ಕಿತು. ಚಾಪೆಲ್ ಮೆಟ್ಟಿಲುಗಳ ಮೇಲೆ ಕುಳಿತು ಜುಗಾಶ್ವಿಲ್ಲಿ ಈ ಪುಸ್ತಕ ಓದುತ್ತಿದ್ದಾಗ ಸಿಕ್ಕಿಹಾಕಿಕೊಂಡ. ಕೀಳು ಪುಸ್ತಕಾಲಯದಿಂದ ತರಲ್ಪಟ್ಟ ಪುಸ್ತಕಗಳನ್ನು ಓದುತ್ತಿರುವಾಗ ಈ ವಿದ್ಯಾರ್ಥಿ ಸಿಕ್ಕಿಹಾಕಿಕೊಂಡಿರುವುದು ಇದು ಹದಿಮೂರನೇ ಬಾರಿ..."

ವರದಿಯಲ್ಲಿ ಇನ್ನೊಂದು ಸೂಚನೆಯೂ ಇದೆ "ಫಾದರ್ ರೆಕ್ಟಾರರ ಆದೇಶದ ಪ್ರಕಾರ ಇವನನ್ನು ದೀರ್ಘ ಕಾಲದವರೆಗೆ ಶಿಕ್ಷಾಕೊಠಡಿಯಲ್ಲಿಟ್ಟು ಬಿಗಿ ಎಚ್ಚರಿಕೆ ನೀಡಿ" (ಮಾರ್ಚ್ 1897).

ಉಚ್ಚಾಟನೆ, ಬಂಧನಗಳು, ಪಲಾಯನಗಳು :

ಇನ್ನೊಂದು ಕಡೆ ಬರೆದದ್ದು: "ಮೇಲ್ವಿಚಾರಕ ಮಂಡಲಿಯ ಸದಸ್ಯರ ನೇತೃತ್ವದಲ್ಲಿ ಐದನೇ ತರಗತಿಯ ವಿದ್ಯಾರ್ಥಿಗಳ ಶೋಧ ನಡೆಸುತ್ತಿದ್ದಾಗ, ವಿದ್ಯಾರ್ಥಿಗಳ ವಾದವಿವಾದದಲ್ಲಿ ಜೋಸೆಫ್ ಜುಗಾಶ್ವಿಲ್ಲಿ ಪದೇಪದೇ ತಲೆಹಾಕಿದ. ಇತರ ಕ್ರೈಸ್ತಮಠಗಳಲ್ಲಿ ಇಂಥ ಶೋಧಗಳನ್ನು ನಡೆಸುವುದಿಲ್ಲ ಎಂದು ಘೋಷಿಸಿದ. ಅಧಿಕಾರದಲ್ಲಿರುವ ವ್ಯಕ್ತಿಗಳ ಬಗ್ಗೆ ಜುಗಾಶ್ವಿಲ್ಲಿ ಸಾಮಾನ್ಯವಾಗಿ ಅಗೌರವದಿಂದ ಒರಟಾಗಿ ನಡೆದುಕೊಳ್ಳುತ್ತಾನೆ. ಯಾವುದೇ ಅಧ್ಯಾಪಕರಿಗೆ ನಮಸ್ಕರಿಸಲು ನಿರಾಕರಿಸುತ್ತಾನೆ". "ಫಾದರ್ ರೆಕ್ಟಾರರ ಆದೇಶದ ಪ್ರಕಾರ ಅವನನ್ನು ಹಿಡಿದು ಶಿಕ್ಷಾ ಕೊಠಡಿಯಲ್ಲಿ ಐದು ಗಂಟೆ ಕಾಲ ಕೂಡಿಹಾಕಲಾಗಿತ್ತು. "ರಾಜಕೀಯವಾಗಿ ನಂಬಲನರ್ಹವಾದವನು" ಎಂದು ಸ್ಟಾಲಿನ್ ಮೇ 1899 ರ ಮೇ 27 ರಂದು ಕ್ರೈಸ್ತ ಮಠದಿಂದ ಹೊರದೂಡಲ್ಪಟ್ಟರು. ಆದರೆ ಈ ಉಚ್ಚಾಟನೆ ಆಕಸ್ಮಿಕವಾದದ್ದೇನಿಸಲಿಲ್ಲ. ಏಕೆಂದರೆ 1896 ರಲ್ಲಿಯೇ ಸ್ಟಾಲಿನ್ ತನ್ನ ಹದಿನೇಳನೇ ವಯಸ್ಸಿನಲ್ಲೇ ಕ್ರೈಸ್ತ ಮಠದೊಳಗೆ ಮೊದಲ ಮಾರ್ಕ್ಸ್‌ವಾದಿ.ಕಾನೂನು ಬಾಹಿರ ವಿಚಾರ ವೇದಿಕೆಯನ್ನು ಕಟ್ಟಿ, ಅಲ್ಲಿ ಮಾರ್ಕ್ಸ್‌ವಾದದ ಒಬ್ಬ ಪ್ರಚಾರಕನಾಗಿದ್ದರು.

ಆದರೆ 1896 ರಲ್ಲಿ ಮಾರ್ಕ್ಸ್‌ವಾದಿ ಕಾನೂನು ಬಾಹಿರ ವಿಚಾರ ವೇದಿಕೆಯನ್ನು ಕಟ್ಟುವುದಕ್ಕೆ ಮತ್ತು ಉಚ್ಚಾಟನೆಗೆ ಮೊದಲೇ ಸ್ಟಾಲಿನ್ ದಬ್ಬಾಳಿಕೆಗೊಳಗಾದವರ ಪರವಾಗಿ ಮಾತನಾಡಿ ಅವರ ವಿಜಯದಲ್ಲಿ ಭರವಸೆ ಇಟ್ಟುಕೊಂಡಿದ್ದರು. ತಮ್ಮ ಮೊದಲ ದಿನಗಳಲ್ಲಿ ಅವನು ಕೆಲವು ಕವಿತೆಗಳನ್ನು ಬರೆದಿದ್ದನು. 1895 ರಲ್ಲಿ ಪ್ರಕಟವಾದ ಒಂದು ಪದ್ಯದಲ್ಲಿ ಅವರು ತಮ್ಮ ನಂಬಿಕೆಯ ಬಗ್ಗೆ ಹೀಗೆ ಹೇಳಿದ್ದಾರೆ.

"Whose back was bent
with
toil unending
who knelt but yesterday
in thrall
Will rise, I say, the
mountain's
envy
on wings of hope, high
over all"

ಎರಡು ದಶಕಗಳ ನಂತರ, ಅಕ್ಟೋಬರ್ ಕ್ರಾಂತಿಯ ವಿಜಯದಿಂದ ಈ ಭರವಸೆ ಈಡೇರಿತು.

ಸ್ಟಾಲಿನ್ ಆರು ಸಲ ಬಂಧನಕ್ಕೊಳಕ್ಕಾಗಿ ಗಡೀಪಾರಾದರು. ಐದು ಬಾರಿ ತಪ್ಪಿಸಿಕೊಂಡು ಬಂದರು. ಅವರ ಬಂಧನ ಮತ್ತು ಪಲಾಯನಗಳನ್ನು ಹೀಗೆ ಪಟ್ಟಿ ಮಾಡಬಹುದು :

* 1902, ಏಪ್ರಿಲ್‌ನಲ್ಲಿ ಬಾಟಮ್‌ನಲ್ಲಿ ಬಂಧನ. 1903 ರ ನವೆಂಬರ್‌ನಲ್ಲಿ ಮೂರು ವರ್ಷ ಸೈಬೀರಿಯಾಗೆ ಗಡೀಪಾರು, 1904ರ ಜನವರಿಯಲ್ಲಿ ಪಲಾಯನ.
* 1908, ಮಾರ್ಚ್‌ನಲ್ಲಿ ಬಾಕುವಿನಲ್ಲಿ ಬಂಧನ. ಸೆಪ್ಟೆಂಬರ್‌ನಲ್ಲಿ ಎರಡು ವರ್ಷ ಸಜೆ. ಜೂನ್ 1909 ರಲ್ಲಿ ಪಲಾಯನ.
* 1910, ಮಾರ್ಚ್‌ನಲ್ಲಿ ಬಾಕುವಿನಲ್ಲಿ ಬಂಧನ, ಜೂನ್ 1911 ರಲ್ಲಿ ಗಡೀಪಾರು, ಪಲಾಯನ.
* 1911, ಸೆಪ್ಟೆಂಬರ್‌ನಲ್ಲಿ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಬಂಧನ, ಡಿಸೆಂಬರ್‌ನಲ್ಲಿ ಗಡೀಪಾರು, 1912 ಫೆಬ್ರವರಿಯಲ್ಲಿ ಪಲಾಯನ.
* 1912, ಏಪ್ರಿಲ್‌ನಲ್ಲಿ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಬಂಧನ, ನಾಲ್ಕು ವರ್ಷಕ್ಕೆ ಪಶ್ಚಿಮ ಸೈಬೀರಿಯಾಗೆ ಗಡೀಪಾರು, ಅದೇ ವರ್ಷದ ಮಧ್ಯದಲ್ಲಿ ಪಲಾಯನ.
* 1913, ಏಪ್ರಿಲ್‌ನಲ್ಲಿ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಬಂಧನ, ಜೂನ್‌ನಲ್ಲಿ ಆರ್ಕ್‌ಟಿಕ್ ವೃತ್ತದಿಂದ 70 ಮೈಲಿ ದೂರಕ್ಕೆ ಗಡೀಪಾರು, 1917ರ ಫೆಬ್ರವರಿಯಲ್ಲಿ ವಾಪಸ್ಸು.

ಉದಯೋನ್ಮುಖ ಕಾರ್ಮಿಕ ನಾಯಕ :

ಪದೇಪದೇ ಬಂಧನಗಳನ್ನು ಪದೇ ಪದೇ ಪಲಾಯನಗಳ ಮೂಲಕ ತಪ್ಪಿಸಿಕೊಂಡ ಈ ಅನಾದೃಶ ಕ್ರಾಂತಿಕಾರಿಯು ಕೆಲಸಗಾರರ ನಡುವೆ ತಾವು ಪ್ರಾರಂಭದಲ್ಲಿ ನಡೆಸುತ್ತಿದ್ದ ಕೆಲಸದ ಬಗ್ಗೆ 1926 ರಲ್ಲಿ ಹೀಗೆ ಬರೆದಿದ್ದಾರೆ.

"ಎಣ್ಣೆ ಕಾರ್ಖಾನೆಯಲ್ಲಿ ಕಾರ್ಮಿಕರ ನಡುವೆ ಎರಡು ವರ್ಷ ಕ್ರಾಂತಿಕಾರಿ ಕೆಲಸವನ್ನು ಮಾಡಿದ ನಂತರ ನಾನು ಒಬ್ಬ ಕಾರ್ಯನಿರತ ಹೋರಾಟಗಾರನಾಗಿ ಮತ್ತು ನಾಯಕರಲ್ಲೊಬ್ಬನಾಗಿ ಹದಗೊಂಡೆ. ಕಾಟ್‌ಸೆಕ್ ಮತ್ತು ಸಾರಟೋವೆಜ್‌ನಂಥ ವ್ಯಕ್ತಿಗಳ ಜೊತೆ, ಬಾಕುನಲ್ಲಿ ಮುಂದುವರಿದ ಕಾರ್ಮಿಕರ ಜೊತೆ ಸಂಬಂಧ ಬಂದದ್ದು, ಮತ್ತು ಕಾರ್ಮಿಕರು ಮತ್ತು ಎಣ್ಣೆ ಮಾಲೀಕರ ನಡುವೆ ಇದ್ದ ತೀವ್ರ ಕಲಹಗಳು, ಇವೆರಡೂ ಕಾರ್ಮಿಕರ ಭಾರಿ ಸಮೂಹದ ನೇತೃತ್ವ ವಹಿಸುವುದೆಂದರೇನು ಎಂಬುದನ್ನು ನನಗೆ ಮೊದಲು ತಿಳಿಸಿದವು. ಬಾಕುವಿನಲ್ಲಿ ನನಗೆ ಬೆಂಕಿಯ ಎರಡನೇ ಕ್ರಾಂತಿಕಾರಿ ಸ್ಪರ್ಶ ಹೀಗೆ ಆಯಿತು. ಇಲ್ಲಿ ನಾನು ಕ್ರಾಂತಿಯ ಪಥಿಕನಾದೆ".

ಈ ಸ್ಪರ್ಶದಿಂದ ತುಂಬ ಏಟು ತಿಂದವರೆಂದರೆ ಜಾರನ ಪೋಲೀಸರು. ಏಕೆಂದರೆ, ಇದರಿಂದ ಜಾರನು ಮಾಡಿದ ಬಂಧನದಿಂದ ತಪ್ಪಿಸಿಕೊಂಡು ತನ್ನ ಕ್ರಾಂತಿಕಾರಿ ಕೆಲಸವನ್ನು ತಡೆಯಿಲ್ಲದೆ ಮುಂದುವರೆಸುವುದು ಸ್ಟಾಲಿನ್‌ಗೆ ಸಾಧ್ಯವಾಯಿತು. ಮಾರ್ಚಿ 1910 ರಲ್ಲಿ ಬಾಕುವಿನ ಪೋಲೀಸ್ ಮುಖ್ಯಸ್ಥ ಕಾಮ್ರೇಡ್ ಸ್ಟಾಲಿನ್ನರ ಬಗ್ಗೆ ಹೀಗೆ ಬರೆದಿದ್ದಾನೆ: "ಎಷ್ಟು ತಡೆದರೂ, ಎಂಥ ತೀವ್ರ ಶಿಕ್ಷೆಗಳಿದ್ದರೂ ಅವನು ಕ್ರಾಂತಿಕಾರಿ ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸಿ, ಅದರಲ್ಲಿ ಪ್ರಮುಖ ಸ್ಥಾನವನ್ನೂ ಪಡೆಯುತ್ತಾನೆ. ಎರಡು ಬಾರಿ ಬಂಧನದಿಂದ ಪಲಾಯನ ಮಾಡಿ ತೀವ್ರ ಶಿಕ್ಷೆಯನ್ನು ಅನುಭವಿಸದೆ ತಪ್ಪಿಸಿಕೊಂಡಿದ್ದಾನೆ. ಆದ್ದರಿಂದ ಇವೆಲ್ಲವನ್ನೂ ಗಮನಿಸಿ ನಾನು ಅವನಿಗೆ ಅತ್ಯಂತ ಹೆಚ್ಚಿನ ಶಿಕ್ಷೆಗೆ ಶಿಫಾರಸು ಮಾಡುತ್ತೇನೆ. ಸೈಬೀರಿಯಾದ ಅತಿ ನಿರ್ಜನ ಭಾಗಗಳಲ್ಲೊಂದಕ್ಕೆ ಐದು ವರ್ಷ ಅವನನ್ನು ಗಡೀಪಾರು ಮಾಡಿ" ("ಸ್ಟಾಲಿನ್–ಅರವತ್ತು ವರ್ಷಗಳು"-ಕಾಲಿನಿನ್)

ಉದಯೋನ್ಮುಖ ಕಾರ್ಮಿಕ ನಾಯಕನ ಬಗ್ಗೆ ಅವರಿಗಿದ್ದ ದ್ವೇಷದಲ್ಲಿ ಆಧ್ಯಾತ್ಮಿಕ, ಐಹಿಕ ಶಕ್ತಿಗಳೆರಡೂ ಸೇರಿದ್ದವು.

ಲೆನಿನ್ ಜೊತೆ ಪ್ರಥಮ ಭೇಟಿ :

ಲೆನಿನ್‌ರೊಂದಿಗೆ ನಡೆದ ತಮ್ಮ ಪ್ರಥಮ ಭೇಟಿಯ ಬಗ್ಗೆ, ಸ್ಟಾಲಿನ್ ಹೀಗೆ ಬರೆದಿದ್ದಾರೆ; "ಟ್ಯಾಮರ್ ಫೋರ್ (ಫಿನ್ಲೆಂಡ್)ನಲ್ಲಿ 1905ರ ಡಿಸೆಂಬರ್‌ನಲ್ಲಿ ನಡೆದ ಬೋಲ್ಷೆವಿಕ್ ಸಮ್ಮೇಳನದಲ್ಲಿ ನಾನು ಲೆನಿನ್ನರನ್ನು ಮೊತ್ತಮೊದಲಿಗೆ ಭೇಟಿಯಾದೆ. ಮಹಾನ್‌ವ್ಯಕ್ತಿಯಾದ ನಮ್ಮ ಪಕ್ಷದ ಶಿಖರಪ್ರಾಯನು ರಾಜಕೀಯವಾಗಿ ಮಹಾನ್‌ವ್ಯಕ್ತಿಯಾಗಿರದೆ ದೈಹಿಕವಾಗಿಯೂ ಇರುವನೆಂದು ನಾನು ಆಶಿಸಿದ್ದೆ. ಏಕೆಂದರೆ ನನ್ನ ಕಲ್ಪನೆಯಲ್ಲಿ ನಾನು ಲೆನಿನ್ನರನ್ನು ಒಬ್ಬ ಬೃಹತ್ ಗಾಂಭೀರ್ಯದ ಮತ್ತು ದರ್ಪದ ವ್ಯಕ್ತಿಯಾಗಿ ಊಹಿಸಿಕೊಂಡಿದ್ದೆ. ಆದರೆ ಒಬ್ಬ ಸಾಮಾನ್ಯ ಮನುಷ್ಯನನ್ನು, ಸರಾಸರಿ ಎತ್ತರಕ್ಕಿಂತ ಕಡಿಮೆ ಇದ್ದವನನ್ನು, ಮತ್ತು ಸಾಮಾನ್ಯ ಮನುಷ್ಯರಿಗಿಂತ ಅಕ್ಷರಶಃ ಯಾವುದೇ ರೀತಿಯಲ್ಲಿ ಬೇರ್ಪಡಿಸಲಾಗದಂಥವನನ್ನು ಕಂಡಾಗ ನನಗಾದ ನಿರಾಶೆ ಎಷ್ಟಿರಬಹುದು" (ಯಾರೊಸ್ಲಾವ್‌ಸ್ಕಿ, ಪು 52)

"ಬೇರೆ ಎಲ್ಲ ಪ್ರತಿನಿಧಿಗಳಿಗಿಂತ ಮೊದಲೇ ಲೆನಿನ್ ಸಮ್ಮೇಳನಕ್ಕೆ ಬಂದು ಒಂದು ಮೂಲೆಯಲ್ಲಿ ಕೂತು, ಸಾಮಾನ್ಯ ಪ್ರತಿನಿಧಿಗಳೊಂದಿಗೆ ಸಾಮಾನ್ಯ ಸಂಭಾಷಣೆಯನ್ನು ತಡೆಯಿಲ್ಲದೆ ನಡೆಸುತ್ತಿದ್ದುದನ್ನು ಕಂಡಾಗ ನನ್ನ ನಿರಾಶೆ ಎಷ್ಟಿರಬಹುದು. ಆದರೆ, ಇದು ಕೆಲವು ಅಗತ್ಯ ನಿಯಮಗಳನ್ನು ಮೀರಿದಂತಾಗುತ್ತದೆ ಎಂದು ನನಗನ್ನಿಸಿದ್ದನ್ನು ನಾನಿಲ್ಲಿ ನಿಮ್ಮೆದುರಿಗೆ ಬಚ್ಚಿಡುವುದಿಲ್ಲ."

"ಆದರೆ ಈ ಸರಳತೆ ಮತ್ತು ವಿನಯಗಳು, ಬೇರೆಯವರು ಗಮನಿಸದಿರುವಂತೆ ಇರುವುದು ಅಥವಾ ತನಗೆ ತಾನೇ ತೋರಿಸಿಕೊಳ್ಳದಿರುವುದು, ತನ್ನ ಉನ್ನತ ಸ್ಥಾನವನ್ನು ಇಲ್ಲಿ ಹೇರದಿರುವುದು, ಈ ಸ್ವಭಾವವೇ, 'ಮಾನವಜನಾಂಗ'ದ ದರ್ಜೆಗಳಾಗಿದ್ದ ಹೊಸ ಜನತೆಯ ಹೊಸ ನಾಯಕನಾಗಿದ್ದ ಲೆನಿನ್ನರ ಅತಿಪ್ರಮುಖ ಅಂಶಗಳು ಎಂಬುದನ್ನು ನಾನು ಕ್ರಮೇಣ ಅರಿತುಕೊಂಡೆ."

"ಲೆನಿನ್‌ವಾದದ ಸಮಸ್ಯೆಗಳು" ಪುಸ್ತಕದಲ್ಲಿ ಸ್ಟಾಲಿನ್ನರು ಲೆನಿನ್‌ವಾದದ ಅತ್ಯಂತ ನಿಖರವಾದ ಮತ್ತು ವೈಜ್ಞಾನಿಕವಾದ ವಿವರಣೆಯನ್ನು ಕೊಡುತ್ತಾರೆ. "ಲೆನಿನ್‌ವಾದ ಸಾಮ್ರಾಜ್ಯಶಾಹಿ ಮತ್ತು ಕಾರ್ಮಿಕ ಕ್ರಾಂತಿಗಳ ಯುಗದ ಮಾರ್ಕ್ಸ್‌ವಾದ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, ಲೆನಿನ್‌ವಾದ ಸಾಧಾರಣವಾಗಿ ಕಾರ್ಮಿಕ ಕ್ರಾಂತಿಯ ಸಿದ್ಧಾಂತ ಮತ್ತು ತಂತ್ರ. ಆದರೆ ವಿಶೇಷವಾಗಿ ಅದು ಕಾರ್ಮಿಕ ಸರ್ವಾಧಿಕಾರದ ಸಿದ್ಧಾಂತ ಮತ್ತು ತಂತ್ರ".

ಭಿನ್ನಮಾರ್ಗಗಾಮಿಗಳ ವಿರುದ್ಧ ಸಮರ :

ಲೆನಿನ್ನರ ಬೋಧನೆಯ ಈ ವೈಜ್ಞಾನಿಕ ತಿಳುವಳಿಕೆಯ ಸಹಾಯದಿಂದ ಬೋಲ್ಷೆವಿಕ್ ಪಕ್ಷವು ಲೆನಿನ್ನರ ಮರಣಾನಂತರ ರಷ್ಯದ ಕಾರ್ಮಿಕ ಕ್ರಾಂತಿಯನ್ನು ಮುನ್ನಡೆಸಲು ಮತ್ತು ಸೋವಿಯೆತ್ ಒಕ್ಕೂಟದಲ್ಲಿ ಸಮಾಜವಾದದ ಅಭೇದ್ಯ ಕೋಟೆಯನ್ನು ಕಟ್ಟಲು ಸಾಧ್ಯವಾಯಿತು. ಟ್ರಾಟ್‌ಸ್ಕಿವಾದ ಮತ್ತು ಬುಖಾರಿನ್ ನೇತೃತ್ವದ ಬಲ ಮಾರ್ಗಗಾಮಿಗಳು ಮುಂತಾದ ಪಕ್ಷದೊಳಗಿನ ಲೆನಿನ್ ವಿರೋಧಿ ಪ್ರವೃತ್ತಿಗಳ ವಿರುದ್ಧ ಕಟುವಾಗಿ ಕ್ರಮಬದ್ಧವಾಗಿ ಹೋರಾಡದಿದ್ದರೆ ಈ ಸಾಧನೆ ಕೈಗೆಟುಕುತ್ತಿಗಲಿಲ್ಲ. ಬೋಲ್ಷೆವಿಕ್ ಪಕ್ಷದ ನಾಯಕತ್ವದಲ್ಲಿ ನಡೆದ ಈ ಹೋರಾಟದಲ್ಲಿ ಸ್ಟಾಲಿನ್ ಅತಿಮುಖ್ಯ ಪಾತ್ರವಹಿಸಿ, ತಮ್ಮ ಚಾರಿತ್ರಿಕ ಕೊಡುಗೆಯನ್ನು ಇತ್ತರು. ಈ ಹೋರಾಟದ ಮುಖ್ಯ ಸ್ಫೂರ್ತಿ, ಪ್ರೇರಕ ಮತ್ತು ಸೈದ್ಧಾಂತಿಕ ನಾಯಕ ಸ್ಟಾಲಿನ್ ಅವರೇ ಎಂಬುದರಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆಯಿಲ್ಲ. ಅವರ ದೃಢ ಮತ್ತು ಸ್ಪಷ್ಟ ಮಾರ್ಗದರ್ಶನವಿಲ್ಲದಿದ್ದರೆ ಹೋರಾಟದಲ್ಲಿ ಅನೇಕ ವಾಲಾಟಗಳು ಮತ್ತು ಅಡ್ಡದಾರಿಗಳು ಬಂದಿರುತ್ತಿದ್ದವು.

ಟ್ರಾಟ್‌ಸ್ಕಿವಾದಿ ವಿನಾಶಕಾರಿಗಳು ಮತ್ತು ಅಡ್ಡತಡೆಗಳನ್ನು ಸೋಲಿಸದೆ ಇದ್ದಿದ್ದರೆ, ಸೋವಿಯೆತ್ ಒಕ್ಕೂಟದಲ್ಲಿ ಸಮಾಜವಾದವನ್ನು ಕಟ್ಟುವ ದಾರಿಯಲ್ಲಿ ಬೋಲ್ಷೆವಿಕ್ ಪಕ್ಷ ದೃಢವಾಗಿ ಹೆಜ್ಜೆಯೂರಲೇ ಆಗುತ್ತಿರಲಿಲ್ಲ. ಟ್ರಾಟ್‌ಸ್ಕಿವಾದದ ಸಿದ್ಧಾಂತ ಮತ್ತು ಬಲ ಮಾರ್ಗಗಾಮಿಗಳ ಹಲ್ಲೆಯನ್ನು ಸೋಲಿಸದೆ ಇದ್ದಿದ್ದರು ಸೋವಿಯೆತ್ ಒಕ್ಕೂಟವು ಸಮಾಜವಾದಿ ಉದ್ಯಮೀಕರಣವನ್ನು ಸಾಧಿಸುತ್ತಿರಲಿಲ್ಲ. ಲೆನಿನ್‌ವಾದದ ವಿರೋಧಿಗಳ ವಿರುದ್ಧ ಸೈದ್ಧಾಂತಿಕವಾಗಿ ಮತ್ತು ರಾಜಕೀಯವಾಗಿ ಹೋರಾಟ ಮಾಡದೆ ಇದ್ದಿದ್ದರೆ, ಸೋವಿಯೆತ್ ಒಕ್ಕೂಟದಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳು ಸಫಲವಾಗುತ್ತಿರಲಿಲ್ಲ. ಅಲ್ಲದೆ, ಹಿಟ್ಲರನ ಸವಾಲನ್ನು ಎದುರಿಸಲು ಸೋವಿಯತ್ ಒಕ್ಕೂಟವು ಆರ್ಥಿಕವಾಗಿ, ವಸ್ತುರೂಪದಲ್ಲಿ ಮತ್ತು ಸೈನಿಕ ರೂಪದಲ್ಲಿ ಸಿದ್ಧವಾಗಲು ಸಾಧ್ಯವಾಗುತ್ತಿರಲಿಲ್ಲ.

ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ (ಅಂತರಾಷ್ಟ್ರೀಯ)ನ ಚಟುವಟಿಕೆಗಳಲ್ಲಿ ಸ್ಟಾಲಿನ್ ಮುಖ್ಯ ಪಾತ್ರ ವಹಿಸಿದರು. ವಸಾಹತು ಜನತೆಯ, ಅದರಲ್ಲೂ ಜನತಾ ಚೀನದ ಕಾಂತ್ರಿಕಾರಿ ವಿಮೋಚನಾ ಹೋರಾಟಗಳಿಗೆ ಅವರು ಮಾರ್ಗದರ್ಶನ ನೀಡಿ, ಈ ದೇಶಗಳ ಎಳೆಯ ಕಮ್ಯುನಿಸ್ಟ್ ಪಕ್ಷಗಳ ಬೆಳವಣಿಗೆಗೆ ಸಹಾಯ ಮಾಡಿದರು.

ಜಗತ್ತನ್ನೇ ಅಲುಗಾಡಿಸುವ ಗೆಲುವು :

ಸ್ಟಾಲಿನ್ ಮತ್ತು ಅವರ ನೇತೃತ್ವದ ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷವು ಹಿಟ್ಲರನ ಫ್ಯಾಸಿಸ್ಟ್ ಆಕ್ರಮಣಗಳ ವಿರುದ್ಧ ಸಾಧಿಸಿದ ಜಗತ್ತನ್ನೇ ಅಲುಗಾಡಿಸುವ ವಿಜಯವನ್ನು ಯಾರು ತಾನೇ ಮರೆತಾರು? ಆಗ ಇಡೀ ಜಗತ್ತು ಫ್ಯಾಸಿಸ್ಟ್ ಶಕ್ತಿಗಳಿಗೆ ಬಲಿಯಾಗುವ ಅಪಾಯ ಇತ್ತು. ಯೂರೋಪಿನ ಪ್ರತಿಗಾಮಿಗಳ ಒತೂರಿಗಳ ಫಲವಾಗಿ ಇಡೀ ಬಂಡವಾಳಶಾಹಿ ಯೂರೋಪು ಅವನ ಕಾಲಿಗೆರಗಿತ್ತು. ಅಲ್ಲದೆ ಜನತೆಗೆ ಮೋಸ ನಡೆದಿತ್ತು. ಅಂಥ ಸಮಯದಲ್ಲಿ, ಸೋವಿಯೆತ್ ಒಕ್ಕೂಟ ಮತ್ತು ಸ್ಟಾಲಿನ್ ನಾಯಕತ್ವದ ಬೋಲ್ಷೆವಿಕ್ ಪಕ್ಷಗಳು ಮಾತ್ರ ಮಾನವಜನಾಂಗ ಮತ್ತು ಸ್ವಾತಂತ್ರ್ಯ ಪಕ್ಷಗಳ ನಡುವೆ ನಿಂತವು. ಮಿಲಿಯಗಟ್ಟಲೆ ಸೋವಿಯೆತ್ ಜನತೆ ಜೀವ ಬಲಿಕೊಟ್ಟು, ಪಕ್ಷದ ಮತ್ತು ಸ್ಟಾಲಿನ್ನರ ಫ್ಯಾಸಿಸ್ಟ್ ವಿರೋಧಿ ಕ್ರಾಂತಿಕಾರಿ ನೀತಿಗೆ ದೃಢವಾಗಿ ಹೆಗಲು ಕೊಟ್ಟುನಿಂತು ಹಿಟ್ಲರನ ಆಕ್ರಮಣವನ್ನು ನಾಶಮಾಡಿದರು. ಇದು ಸ್ಟಾಲಿನ್ ರಕ್ಷಿಸಿದ ಮತ್ತು ಅನುಸರಿಸಿದ ಲೆನಿನ್‌ವಾದದ ಇನ್ನೊಂದು ಮಹತ್ಸಾಧನೆ.

ಮಾನವಜನಾಂಗದ ಹಣೆಬರಹವನ್ನು ನಿರ್ಧರಿಸಿದ ಈ ಭಯಂಕರ ಹೋರಾಟದಲ್ಲಿ, ತಾವು ಆ ಕಾಲದ

[6ನೇ ಪುಟ ನೋಡಿ]

ಪಶ್ಚಿಮ ಬಂಗಾಳದಲ್ಲಿ ವಾಮರಂಗ ಬೆಂಬಲಿಗರ ಕಗ್ಗೊಲೆ

ಪಶ್ಚಿಮ ಬಂಗಾಳದ ಕಾನೂನು ಮತ್ತು ನ್ಯಾಯ ಪರಿಪಾಲನೆಯ ಬಗ್ಗೆ ಕಾಂಗ್ರೆಸ್ (ಐ), ಕಾಂಗ್ರೆಸ್, ಜನತಾ ಮತ್ತು ಇತರ ಪಕ್ಷಗಳೆಲ್ಲವೂ ಒಟ್ಟಾಗಿ ಆಕ್ರಂದನ ಮಾಡುತ್ತಿವೆ. ರಾಜ್ಯದ ವಾಮರಂಗ ಸರಕಾರದ ವಿರುದ್ಧ ಜಂಟಿ ಚಟುವಟಿಕೆಗಳನ್ನು ನಡೆಸಲು ಯೋಜನೆ ಹಾಕುತ್ತಿವೆ.

ಆದರೆ ವಾಮರಂಗ ಸರ್ಕಾರ ಅಧಿಕಾರ ವಹಿಸಿಕೊಂಡ 23 ತಿಂಗಳಲ್ಲಿ ಅದರ ವಿರೋಧಿಗಳು 63 ಮಂದಿ ವಾಮರಂಗದ ಬೆಂಬಲಿಗರ ಕಗ್ಗೊಲೆ ನಡೆಸಿದ್ದಾರೆ. ಅವರಲ್ಲಿ ಪಕ್ಷದ ಸದಸ್ಯರು, ಕಾರ್ಯಕರ್ತರು, ವಿದ್ಯಾರ್ಥಿನಾಯಕರು, ಕಾರ್ಮಿಕ ನಾಯಕರು, ಮಹಿಳೆಯರು, ಕೃಷಿ ಕಾರ್ಮಿಕರು, ಯುವಕರು ಸೇರಿದ್ದಾರೆ. ಕಾಂಗ್ರೆಸ್ (ಐ), ಕಾಂಗ್ರೆಸ್, ಜನತಾಪಕ್ಷ ಮತ್ತು ಮುಸ್ಲಿಮ್‌ಲೀಗಿನ ದುಷ್ಟ ಶಕ್ತಿಗಳ ಏಜೆಂಟರು ಇವರ ಕೊಲೆ ನಡೆಸಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಈ ಪಕ್ಷಗಳಿಗೆ ಸೇರಿದ ಜಮೀನ್ದಾರರು ಈ ಕೊಲೆಗಳನ್ನು ನಡೆಸಲು ಗೂಂಡಾಗಳನ್ನು ಬಾಡಿಗೆಗೆ ನೇಮಿಸಿಕೊಳ್ಳುತ್ತಾರೆ. ಕೈಗಾರಿಕಾ ಕ್ಷೇತ್ರಗಳಲ್ಲಿ ದೊಡ್ಡ ಉದ್ಯಮಿಗಳ ಏಜೆಂಟರು ಮತ್ತು ಸಮಾಜ ವಿರೋಧಿ ಅಂಶಗಳು ಕಾರ್ಮಿಕರ ಮತ್ತು ಯುವ ಕಾರ್ಯಕರ್ತರ ಕೊಲೆ ನಡೆಸುತ್ತಾರೆ.

ಅನೇಕ ಸ್ಥಳಗಳಲ್ಲಿ ಇವೆಲ್ಲವನ್ನೂ ನೋಡಿಕೊಂಡು ಪೋಲೀಸರು ಸುಮ್ಮನಿದ್ದಾರೆ. ತಮ್ಮ ಹನ್ನೆರಡು ಮಂದಿ ಕಾರ್ಯಕರ್ತರು ಹಲ್ಲೆಯಲ್ಲಿ ಸತ್ತರೆಂದು ವಿರೋಧ ಪಕ್ಷಗಳು ಹೇಳುತ್ತಿವೆ. ಆದರೆ ತಮ್ಮವರೆಂದು ಅವರು ಹೇಳಿಕೊಳ್ಳುವ ಈ ಜನ ಆಯಾ ಪ್ರದೇಶಗಳ ಕುಖ್ಯಾತ ಸಮಾಜದ್ರೋಹಿಗಳಾಗಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ.

ಮಾರಾಟ ತೆರಿಗೆ ಚಳುವಳಿ, ಪಾಲಿಟ್ ಬ್ಯೂರೊ ಹೇಳಿಕೆ

ಉತ್ತರಪ್ರದೇಶದಲ್ಲಿ ಪ್ರಾರಂಭವಾದ ಮಾರಾಟ ತೆರಿಗೆ ವಿರೋಧ ಚಳುವಳಿಯು ಬೇರೆಬೇರೆ ರಾಜ್ಯಗಳಿಗೆ ಹಬ್ಬುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೊ ಗಮನಕ್ಕೆ ತಂದುಕೊಂಡಿದೆ. ಚಳುವಳಿಗೆ ಪ್ರೇರಣೆ ನೀಡಿದವರು ತೆರಿಗೆ ತಪ್ಪಿಸಿಕೊಳ್ಳುವ ದೊಡ್ಡ ವ್ಯಾಪಾರಸ್ಥರಾಗಿದ್ದರೂ, ಈ ಚಳುವಳಿಗೆ ವ್ಯಾಪಾರ ವಿಭಾಗದ ಎಲ್ಲಾ ಜನರ ಬೆಂಬಲ ದೊರೆತಿದೆ.

ಮಾರಾಟತೆರಿಗೆಯು ನೇರವಾಗಿ ಖರೀದಿ ಮಾಡುವವರ ಮೇಲೆ ಬೀಳುವುದರಿಂದ, ಮಾರಾಟ ತೆರಿಗೆಯಿಂದ ತೊಂದರೆಗೀಡಾಗುವವರು ವ್ಯಾಪಾರಸ್ಥರಲ್ಲ. ಬದಲು ಜನತೆ. ವ್ಯಾಪಾರಸ್ಥರಲ್ಲೂ ತೆರಿಗೆ ಇಲಾಖೆಯವರ ಕೃಪಾಕಟಾಕ್ಷಕ್ಕೆ ಬಲಿಯಾಗಬೇಕಾಗುವವರೂ ಮತ್ತು ಕಪ್ಪಕಕ್ಕೊಳಗಾಗುವವರೂ ಸಣ್ಣಪುಟ್ಟ ವ್ಯಾಪಾರಸ್ಥರು. ಈ ವಿಭಾಗಕ್ಕೆ ಪಕ್ಷದ ಸಹಾನುಭೂತಿ ಇದೆ.

ಆದರೆ ಮಾರಾಟ ತೆರಿಗೆಯನ್ನು ರದ್ದು ಮಾಡಿ, ಕೇಂದ್ರ ಅಬ್ಕಾರಿ ತೆರಿಗೆಯನ್ನು ಹಾಕಬೇಕೆನ್ನುವ ವ್ಯಾಪಾರಸ್ಥರ ಬೇಡಿಕೆಯನ್ನು ಪಕ್ಷವು ವಿರೋಧಿಸುತ್ತದೆ. ಏಕೆಂದರೆ ; ರಾಜ್ಯಗಳಿಗೆ ರಾಜ್ಯ ಸರಕಾರದ ನಿಯಂತ್ರಣದಲ್ಲಿರುವ ಆದಾಯದ ಮೂಲವಾಗಿದೆ. ಮಾರಾಟ ತೆರಿಗೆಯನ್ನು ರದ್ದುಗೊಳಿಸಿ, ಕೇಂದ್ರ ತೆರಿಗೆಯನ್ನು ಹೇರಿದರೆ ಆರ್ಥಿಕ ಕೇಂದ್ರೀಕರಣವನ್ನು ಇನ್ನೂ ಬಲಪಡಿಸಿ, ಆರ್ಥಿಕ ಸ್ವಾಯತ್ತತೆಗೆ ಕೊಡಲಿಯೇಟು ಹಾಕಿದಂತಾಗುವುದು.

ತೆರಿಗೆ ಇಲಾಖೆಯಿಂದ ಕಪ್ಪಕ್ಕೊಳಗಾಗುವ ಸಣ್ಣಪುಟ್ಟ ವ್ಯಾಪಾರಸ್ಥರ ಸಮಸ್ಯೆ ಪರಿಹಾರದ ಬಗ್ಗೆ ಕೇಂದ್ರ ಮತ್ತು ರಾಜ್ಯಸರಕಾರಗಳು ಸಮಾಲೋಚಿಸಿ ಕ್ರಮ ತೆಗೆದುಕೊಳ್ಳುವಂತೆ ಪಾಲಿಟ್‌ಬ್ಯೂರೋವು ಆಶಿಸುತ್ತದೆ ಮತ್ತು ಮಾರಾಟ ತೆರಿಗೆಯು ಜನತೆಯ ಕೊಳ್ಳುವ ಶಕ್ತಿಯನ್ನು ಹೊಂದಿಕೊಂಡಿರುವಂತೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತದೆ. ●

ನೇಪಾಳದ ವಿದ್ಯಮಾನಗಳು

[3ನೇ ಪುಟದಿಂದ]

ಕರಭಾರ, ಪುಕ್ಕಟೆ ದುಡಿಮೆ, ಶಿಕ್ಷಣದಲ್ಲಿ ಬಿಗಿ ಧೋರಣೆ, ಫ್ಯಾಸಿಸ್ಟ್ ಸಂಘಟನೆ, ಮುಂತಾದವುಗಳ ವಿರುದ್ಧವಾಗಿಯೂ, ಮೂಲಭೂತ ನಾಗರಿಕ ಹಕ್ಕುಗಳಿಗಾಗಿಯೂ, ಸಂಘಟನಾ ಸ್ವಾತಂತ್ರ್ಯ ಮತ್ತು ಆರ್ಥಿಕ ಬೇಡಿಕೆಗಳಿಗಾಗಿಯೂ ಜನತಾ ಚಳುವಳಿಯು ಕಾಡ್ಗಿಚ್ಚಿನಂತೆ ಭುಗಿಲೆದ್ದು ದೇಶಾದ್ಯಂತ ಹರಡಿತು. ಹೊಸ ಹೋರಾಟದಲ್ಲಿ ನೇಪಾಳದ 80 ಕಾಲೇಜುಗಳಲ್ಲಿನ ವಿದ್ಯಾರ್ಥಿಗಳೂ ಬುದ್ಧಿಜೀವಿಗಳೂ ಮಹತ್ವದ ಪಾತ್ರ ವಹಿಸಿರುವರು. ಹೋರಾಟವನ್ನು ಹತ್ತಿಕ್ಕಲು ಪೋಲೀಸು ಮತ್ತು ಮಿಲಿಟರಿ ಪಡೆಗಳನ್ನು ಸರಕಾರ ಉಪಯೋಗಿಸಬೇಕಾಯಿತು. ಅಧಿಕೃತ ವಲಯಗಳಿಂದಲೇ ತಿಳಿದುಬಂದಂತೆ ಸುಮಾರು 20 ಜನರು ಹೋರಾಟದಲ್ಲಿ ಮೃತರಾದರು. 250ಜನ ಗಾಯಗೊಂಡರು, ಕೊಯಿರಾಲರೂ ಸೇರಿದಂತೆ ನೂರಾರು ಜನರು ಸೆರೆಮನೆ ಸೇರಿದರು. ಆದರೆ ಹೋರಾಟ ಇನ್ನಷ್ಟೂ ತೀವ್ರವಾಯಿತು. ಪ್ರಧಾನಿ ಕೀರ್ತಿನಾಥಬಿಷ್ಟರು ರಾಜಿನಾಮೆ ಕೊಡುವುದರೊಂದಿಗೆ ಹೊಸ ರಾಜಕೀಯ ಬಿಕ್ಕಟ್ಟು ಉಂಟಾಯಿತು.

20ನೇ ಶತಮಾನದ ಕೊನೆಯ ಕಾಲು ಭಾಗದಲ್ಲಿ ಜನರು ಅರಸೊತ್ತಿಗೆಯ ನಿರಂಕುಶ ಪ್ರಭುತ್ವವನ್ನು ಸಹಿಸಲಾರರು ಎಂಬ ಪಾಠವನ್ನು ಇರಾನಿನ ವಿದ್ಯಮಾನಗಳಿಂದ ತಿಳಿದುಕೊಂಡ ನೇಪಾಳದ ಚಾಣಾಕ್ಷ ದೊರೆ ಬೀರೇಂದ್ರರು ಈಗಿರುವ 'ಪಂಚಾಯತ್' ಪದ್ಧತಿ ಮುಂದುವರಿಯಬೇಕೆ, 'ಸುಧಾರಿತ ಪಂಚಾಯತ್' ಪದ್ಧತಿ ಬೇಕೆ ಅಥವಾ 1960ರ ಪೂರ್ವದಲ್ಲಿದ್ದ ಬಹುಪಕ್ಷೀಯ ಪಾರ್ಲಿಮೆಂಟ್ ಪ್ರಜಾಪ್ರಭುತ್ವ ಬೇಕೆ ಎಂದು ತಿಳಿಯಲು ಜನಮತ ಗಣನೆ (referendum) ನಡೆಸುವುದಾಗಿ ಇತ್ತೀಚೆಗೆ ಘೋಷಿಸಿರುವರು. ಇದಕ್ಕಾಗಿ ಒಂದು ವಿಶೇಷ ಚುನಾವಣಾ ಆಯೋಗವನ್ನೂ ನೇಮಿಸಿರುವರು.

ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಶೀಲಿಸಲೂ ಒಂದು ವಿಶೇಷ ಆಯೋಗವನ್ನು ನೇಮಿಸಲಾಗಿದೆ. ಇಷ್ಟರಲ್ಲಿಯೇ ಈ ಆಯೋಗವು ವಿದ್ಯಾರ್ಥಿಗಳ ಎಲ್ಲಾ ಬೇಡಿಕೆಗಳನ್ನು ಈಡೇರಿಸಿಕೊಡುವುದಾಗಿ ಆಶ್ವಾಸನೆ ನೀಡಿದೆ. ವಿದ್ಯಾರ್ಥಿಗಳು ಸ್ವತಂತ್ರ ಸಂಘಟನೆಗಳನ್ನು ರಚಿಸಿಕೊಳ್ಳಲು ಈಗ ಅನುಮತಿ ನೀಡಲಾಗಿದೆ. ವಿದ್ಯಾರ್ಥಿ ಮಂಡಳಿ ಸಂಘಟನೆಯನ್ನು ವಿಸರ್ಜಿಸಬೇಕೆಂಬ ಬೇಡಿಕೆಯೂ ಈಡೇರಿದೆ. ಇದೊಂದು ಮಹತ್ವದ ಸಾಧನೆ. ಆದರೆ, ಈ ಸಂಘಟನೆಯ ನಿರುದ್ಯೋಗಿ ಕಾರ್ಯಕರ್ತರು ಸಮಾಜಘಾತುಕ ಕಾರ್ಯಗಳಲ್ಲಿ ನಿರತರಾಗಿ ಪ್ರಜಾಸತ್ತಾತ್ಮಕ ಹೋರಾಟಕ್ಕೆ ದಕ್ಕೆತರಬಹುದೆಂದು ಭಯ ಪಡಲಾಗಿದೆ. ವಿದ್ಯಾರ್ಥಿಗಳ ಬೇಡಿಕೆಗಳು ಒಂದೊಂದೇ ಈಡೇರುವುದರಿಂದ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿಗಳು ತಮ್ಮ ಚಳುವಳಿಯನ್ನು ನಿಲ್ಲಿಸಲು ಬಯಸಿದರೂ, ಅರಸೊತ್ತಿಗೆಯ ಆಶ್ವಾಸನೆಗಳನ್ನು ನಂಬಕೂಡದೆಂದೂ, ಕಾರ್ಮಿಕರ ಮತ್ತು ರೈತರ ಸಮಸ್ಯೆಗಳು ಬಗೆಹರಿಯುವವರೆಗೆ ವಿದ್ಯಾರ್ಥಿಗಳ ಚಳುವಳಿ ಮುಂದುವರಿಯಬೇಕೆಂದೂ ಎಡಪಕ್ಷಗಳು ಒತ್ತಾಯಿಸುತ್ತಿವೆ. ಕಾರ್ಮಿಕರು ದೇಶಾದ್ಯಂತ ಮುಷ್ಕರ ಮಾರ್ಗ ಹಿಡಿದಿದ್ದಾರೆ. ಬ್ಯಾಂಕು ನೌಕರರು ಹೋರಾಟದ ಮುಂಚೂಣಿಯಲ್ಲಿದ್ದಾರೆ. ಹಂಗಾಮಿ ಪ್ರಧಾನಿ ಸೂರ್ಯಬಹದ್ದೂರ್ ಥಾಪಾರ ಮಂತ್ರಿ ಮಂಡಳಿಯು ಮುಷ್ಕರಗಳನ್ನು ಮುರಿಯಲು ಅಗತ್ಯ ಸೇವೆಗಳ ಕಾನೂನನ್ನು ಬಳಸಿ ಮುಷ್ಕರಗಳನ್ನು ನಿಷೇಧಿಸುವ ಸುಗ್ರೀವಾಜ್ಞೆ ಹೊರಡಿಸಿದೆ. ಕೊಯಿರಾಲರು ಹೋರಾಟ ಮುಷ್ಕರಗಳನ್ನು ನಿಲ್ಲಿಸುವಂತೆ ಮನವಿ ಮಾಡುತ್ತಿದ್ದಾರೆ. ಆದರೆ ಕಾರ್ಮಿಕರೂ, ವಿದ್ಯಾರ್ಥಿಗಳೂ ಧೃತಿಗೆಡದೆ ಅರಸೊತ್ತಿಗೆಯ ಫ್ಯಾಸಿಸ್ಟ್ ಸಂಘಟನೆಗಳ ಬಲ ಅಡಗಿಸುತ್ತಿದ್ದಾರೆ. ವೇತನ ಹೆಚ್ಚಳ, ಸಂಘಟನಾ ಸ್ವಾತಂತ್ರ್ಯ, ಕೆಲಸ ಖಾಯಂಗೊಳಿಸುವುದು ಮುಂತಾದ ಬೇಡಿಕೆಗಳನ್ನು ಕೆಲವೆಡೆಗಳಲ್ಲಿ ಈಡೇರಿಸಲಾಗಿದೆ. ಹೋರಾಟವು ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೂ ಕೃಷಿ ಕಾರ್ಮಿಕರಿಗೂ ಹಬ್ಬಿದೆ. ಜನಮತಗಣನೆ ನಡೆಯುವವರೆಗೆ ಪತ್ರಿಕೆಗಳ ಮೇಲಿನ ಬಿಗಿ ಸಡಿಲಗೊಳಿಸಲಾಗಿದೆ. ರಾಜಕೀಯ ಪಕ್ಷಗಳು ಇನ್ನೂ ನಿಷೇಧಿಸಲ್ಪಟ್ಟಿದ್ದರೂ, ರಾಜಕೀಯ ಚಟುವಟಿಕೆಗಳ ನಿಷೇಧವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ.

ಜನಮತ ಗಣನೆಯ ಘೋಷಣೆಯು ಜನರ ಭಾರೀ ಹೋರಾಟದ ನಂತರ ಬಂದಿರುವುದು ಸ್ವಾಗತ. ಆದರೆ, ಇದರ ಉದ್ದೇಶ ಜನರ ಸಿಧ್ಯದ ಅಸಮಾಧಾನವನ್ನೂ ರಾಜಕೀಯ ಬಿಕ್ಕಟ್ಟನ್ನೂ ಬಗೆಹರಿಸುವುದೇ ಆಗಿದೆ. ಯಾವ ದೇಶದಲ್ಲಿಯೂ ಅರಸೊತ್ತಿಗೆಯನ್ನು ಸುಲಭವಾಗಿ ಬಿಟ್ಟುಕೊಟ್ಟಿದ್ದಿಲ್ಲ. ಅರಸೊತ್ತಿಗೆಯು ನಡೆಸುವ ಜನಮತ ಗಣನೆಯು ಪ್ರಭುತ್ವದ ಪರವಾಗಿಯೇ ಇರುವ ಸಂಭವ ಹೆಚ್ಚು. ಅರಸೊತ್ತಿಗೆಯ ಪರವಾಗಿ, 'ಪಕ್ಷಾತೀತ ಪಂಚಾಯತ್ ಪ್ರಜಾಪ್ರಭುತ್ವ'ದ ಪರವಾಗಿ ಈಗಾಗಲೇ ಸ್ಥಾಪಿತ ಹಿತಾಸಕ್ತಿಗಳು ಬಿರುಸಿನ ಪ್ರಚಾರಗಳನ್ನು ನಡೆಸುತ್ತಿವೆ. ಚುನಾವಣೆಯನ್ನು ಎದುರಿಸಲು 'ಪಂಚಾಯತ್' ಪರವಾದ ಶಕ್ತಿಗಳು ವ್ಯಕ್ತಿಗಳು 'ರಾಯಲಿಸ್ಟ್ ಪಾರ್ಟಿ' ರಚಿಸಲು ಸಿದ್ಧತೆ ನಡೆಸುತ್ತಿವೆ. ಪ್ರಜಾಸತ್ತಾತ್ಮಕ ಶಕ್ತಿಗಳು ವ್ಯಕ್ತಿಗಳು ಇದರ ವಿರುದ್ಧ ಸಂಯುಕ್ತ ರಂಗವನ್ನು ರಚಿಸಲು ಸಿದ್ಧತೆ ನಡೆಸುತ್ತಿವೆ. ನೇಪಾಳದ ರಾಜಕೀಯದಲ್ಲಿ ಇತ್ತೀಚಿನ ಹೋರಾಟದಲ್ಲಿ ಇದೊಂದು ಹೊಸ ತಿರುವು. ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಯಶಸ್ಸಾಗಲೆಂದು ನಾವು ಹಾರೈಸೋಣ. ●

ಸ್ಟಾಲಿನ್

[5ನೇ ಪುಟದಿಂದ]

ಅತಿ ಶ್ರೇಷ್ಠ ಸೈದ್ಧಾಂತಿಕ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನಾಯಕರಷ್ಟೇ ಅಲ್ಲ, ಮಹಾನ್ ಸೈನಿಕ ನಾಯಕ ಮತ್ತು ಪ್ರತಿಭಾವಂತ ಎಂಬುದನ್ನೂ ಸ್ಟಾಲಿನ್ ತೋರಿಸಿಕೊಂಡರು. ಅವರ ಮಾರ್ಗದರ್ಶನ, ಅವರ ಮಿಲಿಟರಿ ತೀರ್ಮಾನಗಳು ಮತ್ತು ಅಭಿಪ್ರಾಯ ರೂಪಿಸಿಕೊಳ್ಳುವುದಕ್ಕೆ ಮುಂಚೆ ಇತರರ ಮಾತನ್ನು ಆಲಿಸುವುದರಲ್ಲಿ ಅವರಿಗಿದ್ದ ಸಾಮರ್ಥ್ಯ ಅವುಗಳನ್ನು ಕುರಿತು ಸೋವಿಯತ್ ಸೈನ್ಯದ ಜನರಲ್‌ಗಳನೇಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ನಾಜಿ ಆಕ್ರಮಣದ ದುರ್ದಿನಗಳಲ್ಲಿ ಸ್ಟಾಲಿನ್ನರ ಜೊತೆ ಹತ್ತಿರದಲ್ಲಿ ಕೆಲಸ ಮಾಡಿದ ವ್ಯಕ್ತಿಗಳು, ಸ್ಟಾಲಿನ್‌ಗೆ ಮಿಲಿಟರಿ ಅಂಶಗಳ ಬಗ್ಗೆ ಏನೂ ಗೊತ್ತಿಲ್ಲ ಎಂಬ ಕ್ರುಶ್ಚೇವರ ಕ್ಷುದ್ರ ಟೀಕೆಯನ್ನು ಅಲ್ಲಗಳೆದಿದ್ದಾರೆ.

[ಮುಂದುವರಿಯುವುದು]

ಹರ್ಬರ್ಟ್ ಇಂಡಿಯಾ ಕಾರ್ಮಿಕರ ಸಫಲ ಹೋರಾಟ

1978ರ ವರ್ಷದಲ್ಲಿ ಶೇಕಡಾ 13 ರಷ್ಟು ಬೋನಸ್ ನೀಡಿಕೆಯ ಬಗ್ಗೆ ಹರ್ಬರ್ಟ್ ಇಂಡಿಯಾದ ಸಂಘ ಮತ್ತು ಆಡಳಿತ ವರ್ಗದ ನಡುವೆ ಒಪ್ಪಂದವಾಗಿತ್ತು. ಕಾರ್ಮಿಕರು 22-6-79ರ ಒಳಗೆ ಬೋನಸ್ ನೀಡಬೇಕೆಂದು ಮನವಿ ಮಾಡಿಕೊಂಡಿದ್ದರು. ಆದರೆ ಆಡಳಿತ ವರ್ಗ ಆಗಸ್ಟ್‌ನಲ್ಲಿ ಕೊಡುವುದಾಗಿ ತಿಳಿಸಿತ್ತು. ಆದರೆ, ಜೂನ್ ತಿಂಗಳಲ್ಲೇ ನೀಡಬೇಕೆಂದು ಇಲ್ಲದಿದ್ದರೆ ಮುಷ್ಕರ ಹೂಡುವುದಾಗಿ ಕಾರ್ಮಿಕರು ನೋಟೀಸು ಕೊಟ್ಟು 8-6-79ರಂದು ಬ್ಯಾಡ್ಜ್ ಧರಿಸಿ ಪ್ರತಿಭಟನೆ ತೋರಿಸಿದರು. ಕಾರ್ಮಿಕರ ಒಗ್ಗಟ್ಟಿನ ಕಾರಣದಿಂದ ಆಡಳಿತ ಜೂನ್ ತಿಂಗಳಲ್ಲೇ ಬೋನಸ್ ಕೊಡಲು ಒಪ್ಪಿಕೊಂಡಿದೆ. ○

ಮಂಗಳೂರಲ್ಲಿ ರಿಕ್ಷಾ ಚಾಲಕರ ಮುಷ್ಕರ

ದ. ಕ. ಜಿಲ್ಲಾ ರಿಕ್ಷಾ ಚಾಲಕರ ಮತ್ತು ಮಾಲಕರ ಸಂಘದ ಕಾರ್ಯಕಾರಿ ಸಮಿತಿಯು ಕೊಟ್ಟ ಕರೆಯ ಮೇರೆಗೆ ತಾ॥ 16-6-79 ಬೆಳಿಗ್ಗೆ 6 ಗಂಟೆಯಿಂದ ತಾ॥ 17-6-79 ಬೆಳಿಗ್ಗೆ 6 ಗಂಟೆಯವರೆಗೆ 24 ಗಂಟೆಗಳ ಕಾಲ "ಪ್ರತಿಭಟನಾ ಮುಷ್ಕರ"ವನ್ನು ರಿಕ್ಷಾ ಚಾಲಕರು ಮತ್ತು ಮಾಲಕರು ಯಶಸ್ವಿಯಾಗಿ ನಡೆಸಿದರು.

ಸಂಘದ ಆಫೀಸಿನಿಂದ ಬೆಳಿಗ್ಗೆ 11 ಗಂಟೆಗೆ ಹೊರಟು ಖಾಕಿ ಯೂನಿಫೋರ್ಮು ಧರಿಸಿದ ರಿಕ್ಷಾ ಚಾಲಕರು ಬೃಹತ್ ಮೆರವಣಿಗೆಯನ್ನು ನಗರದ ಮುಖ್ಯ ಬೀದಿಗಳಲ್ಲಿ ನಡೆಸಿ ಡೆಪ್ಯೂಟಿ ಕಮೀಷನರ ಮೂಲಕ ರಾಜ್ಯದ ಗೃಹ ಶಾಖಾ ಕಾರ್ಯದರ್ಶಿಗಳಿಗೆ ಒಂದು ಪ್ರತಿಭಟನಾ ಮನವಿಯನ್ನು ಕೊಟ್ಟರು. ಈ ಮನವಿಯ ನಕಲನ್ನು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟ್‌ರಿಗೂ ಆರ್. ಟಿ. ಓ. ರವರಿಗೂ ಕೊಡಲಾಯಿತು.

ರಿಕ್ಷಾ ಚಾಲಕರ ಮತ್ತು ಮಾಲಕರ ದೃಷ್ಟಿಯಿಂದ ಕನಿಷ್ಠ ರೂ. 1 ಸ್ವಾಗತನೀಯವೆಂದೂ, ಆದರೆ ಕಿಲೋ ಮೀಟರ್ 1ರ 50 ಪೈಸೆ ಮಾತ್ರ ಬಹಳ ಕಡಿಮೆಯಾಯಿತೆಂದೂ, ಇದು ಕೇವಲ 5 ಪೈಸೆ ಹೆಚ್ಚಳವೆಂದೂ, ತೆರಿಗೆ ಹೆಚ್ಚಳ ಪೆಟ್ರೋಲ್ ದರ ಹೆಚ್ಚಳ (ಟು-ಅಂಡ್ ಫ್ರೊ ಟ್ರಾಫಿಕ್ ಇಲ್ಲದಿದ್ದಾಗ) ಸ್ಪೇರ್ ಪಾರ್ಟ್ಸ್ ದರ ಹೆಚ್ಚಳ, ಇವೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡಾಗ ಇದು ತೀರ ಕಡಿಮೆ ಎಂದೂ, ಕೂಡಲೇ ಈ ದರವನ್ನು ಪುನಃ ವಿಮರ್ಶಿಸಬೇಕೆಂದೂ ಮನವಿಯ ಮೂಲಕ ಸರಕಾರವನ್ನು ಒತ್ತಾಯಿಸಿದರು.

ಸಾರ್ವಜನಿಕ ಸಭೆಯು ನೆಹರೂ ಮೈದಾನದಲ್ಲಿ ನಡೆದು, ಎಲ್ಲಾ ರಿಕ್ಷಾದವರು ಮೀಟರ್ ಚಾಲೂ ಮಾಡಬೇಕೆಂದೂ, ನ್ಯಾಯವಾದ ಮತ್ತು ಆರ್ಥಿಕವಾದ ಚಾರ್ಜನ್ನು ಒಂದೇ ರೀತಿಯಲ್ಲಿ ಎಲ್ಲಾ ರಿಕ್ಷಾದವರೂ ವಸೂಲಿ ಮಾಡಬೇಕೆಂದೂ, ಈ ಬಗ್ಗೆ ಕೊನೆಯ ತೀರ್ಮಾನವನ್ನು ತಾ॥ 19-6-79 ರಂದು ರಿಕ್ಷಾ ಚಾಲಕರ ಮತ್ತು ಮಾಲಕರ ಸಂಘದ ಮಹಾ ಸಭೆಯಲ್ಲಿ ತೆಗೆದುಕೊಳ್ಳಬೇಕೆಂದೂ ತೀರ್ಮಾನಿಸಲಾಯಿತು.

ಬಹಳ ಜನಸಂದಣಿಯಿರತಕ್ಕ, ಕೈಗಾರಿಕಾ ನಗರ ಹಾಗೂ ರಾಜಧಾನಿಯಾದ ಬೆಂಗಳೂರು ನಗರಕ್ಕೂ, ಇತರ ಸಣ್ಣ ನಗರಗಳಿಗೂ ಬಹಳ ವ್ಯತ್ಯಾಸವಿದೆ. ಸಣ್ಣ ನಗರಗಳಲ್ಲಿ ಆಟೋಗಳಿಗೆ ಸಾಕಷ್ಟು ಬೇಡಿಕೆ ಇರುವುದಿಲ್ಲ. ಹೀಗಾಗಿ ಎರಡೂ ಕಡೆಗಳಿಂದ ಅವುಗಳ ಪ್ರಯಾಣಿಕರು ದೊರೆಯುವುದಿಲ್ಲ. ಇವೆಲ್ಲವುಗಳನ್ನು ಪರಿಗಣಿಸಿ ಸಣ್ಣ ನಗರಗಳಾದ ಮಂಗಳೂರು, ಮೈಸೂರು ನಂತಹಲ್ಲಿ ಸರಕಾರ ನಿಗದಿ ಮಾಡುವ ಮೀಟರಿನ ಮೇಲಿನ ಕನಿಷ್ಟ ದರವನ್ನು ಪುನರ್ವಿಮರ್ಶೆ ಮಾಡಬೇಕು. ●

ಗುಲ್ಬರ್ಗದಲ್ಲಿ ಕಾರ್ಮಿಕರ ಒಗ್ಗಟ್ಟಿನ ಹೋರಾಟ

ಗುಲ್ಬರ್ಗದಲ್ಲಿ ಎಂ. ಎಸ್. ಕೆ. ಮಿಲ್ಸ್‌ನಲ್ಲಿ ಕಾರ್ಮಿಕರು ಎಚ್ಚೆತ್ತು ತಮ್ಮ ಬೇಡಿಕೆಗಳಿಗಾಗಿ ಹೋರಾಟಕ್ಕೆ ತೊಡಗಿದ್ದಾರೆ. ಸಿ. ಐ. ಟಿ. ಯು., ಹೆಚ್. ಎಂ. ಎಸ್., ಇಂಟಕ್‌ಗಳು ಒಕ್ಕೂಟ ಮಾಡಿಕೊಂಡು ಬೇಡಿಕೆಗಳ ಬಗ್ಗೆ ಆಡಳಿತ ವರ್ಗಕ್ಕೆ ನೋಟೀಸು ಕೊಟ್ಟಿದ್ದವು. ಮೇಲಿನ ಟ್ರೇಡ್ ಯೂನಿಯನ್‌ಗಳ ಕ್ರಿಯಾ ಸಮಿತಿಗೆ ಕಾಂ. ನಾಗಪ್ಪ ಅವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು.

ಈ ನೋಟೀಸನ್ನು ಆಡಳಿತ ಅಲಕ್ಷಿಸಿದ್ದರಿಂದ ಕಾರ್ಮಿಕರು ಮುಷ್ಕರಕ್ಕೆ ತೊಡಗಿದರು. ಮಿಲ್ಲಿಗೆ ಹೋಗುವುದನ್ನು ಬಹಿಷ್ಕರಿಸಿ ನಗರದ ಮುಖ್ಯ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ಈ ಹೋರಾಟಕ್ಕೆ ಇತರ ಕಾರ್ಮಿಕ ಸಂಘಗಳು ಬೆಂಬಲ ಸೂಚಿಸಿದ್ದರು. ಹೋರಾಟದ ಫಲವಾಗಿ ಆಡಳಿತವು ಬೇಡಿಕೆಗಳನ್ನು ಪರಿಶೀಲಿಸಿ, ಮೂಲವೇತನದಲ್ಲಿ 30 ರೂ ಹೆಚ್ಚಳ, 26 ರೂ ತುಟ್ಟಿಭತ್ಯದ ಹೆಚ್ಚಳ, ಆರು ದಿನಗಳ ಹಕ್ಕುರಜೆ, ಮೂರು ದಿನಗಳ ವೇತನ ಸಹಿತ ರಜೆ ಇವುಗಳನ್ನು ನೀಡಲು ಒಪ್ಪಿತು.

ಈ ಹೋರಾಟಕ್ಕೆ ಕಾಂ. ಗಂಗಾಧರ ನಮೋಶಿ ಮುಂತಾದವರು ಮುಂದಾಳತ್ವ ವಹಿಸಿದ್ದರು. ಸಿ.ಐ.ಟಿ.ಯು. ಆಶ್ರಯದ ಎಂ.ಎಸ್.ಕೆ. ಮಿಲ್ಸ್ ಕೆಲಸಗಾರರ ಸಂಘ ಮುಖ್ಯ ಪಾತ್ರ ವಹಿಸಿತ್ತು. ●

ಕೊಕ್ಕೋ ಕಾರ್ಮಿಕರ ಯಶಸ್ವಿ ಸತ್ಯಾಗ್ರಹ

ದ. ಕ. ಜಿಲ್ಲಾ ಪುತ್ತೂರು ತಾಲ್ಲೂಕಿನ ನೆಟ್ಟಣ, ಕುಲ್ಕುಂದ, ಕೊಂಬಾರು, ಶೀರಾಡಿ ಇತ್ಯಾದಿ ಸ್ಥಳಗಳಲ್ಲಿ ಸರಕಾರಿ ಸ್ವಾಮ್ಯತ್ವದಲ್ಲಿ ನೂರಾರು ಎಕ್ರೆಗಳಲ್ಲಿ ಕೊಕ್ಕೋ ಬೆಳೆಯನ್ನು ಸಮೃದ್ಧವಾಗಿ ಬೆಳೆಸಲಾಗಿದೆ. ಬೆಳೆಯು ಸಮೃದ್ಧವಾಗಿ ಬೆಳೆಯಬೇಕಾದರೆ ಕಾರ್ಮಿಕರು ಬೆವರು ಸುರಿಸಿ ದುಡಿಯಲೇಬೇಕು. ಆದರೆ ಇಲ್ಲಿ ಹಲವಾರು ವರ್ಷಗಳಿಂದಲೂ ದುಡಿಯುವ ತೋಟ ಕಾರ್ಮಿಕರಿಗೆ ನ್ಯಾಯವಾದ ವೇತನ ಸೌಲಭ್ಯಗಳು ಇನ್ನೂ ದೊರೆತಿಲ್ಲ; ಪ್ಲಾಂಟೇಷನ್ ಕಾರ್ಮಿಕ ಕಾಯಿದೆಗೆ ಒಳಪಟ್ಟಿಲ್ಲ.

ಇಲ್ಲಿರುವ ಕಾರ್ಮಿಕರು ಸಿ.ಐ.ಟಿ.ಯು. ವಿನ ನೇತೃತ್ವದ ತೋಟಕೆಲಸಗಾರರ ಸಂಘದಲ್ಲಿ ಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ತಾ. 13.6.79ರಂದು ಪುತ್ತೂರಿನ ಕೊಕ್ಕೋ ವಿಭಾಗಾಧಿಕಾರಿಯವರ ಕಚೇರಿಯ ಮುಂದೆ ಸತ್ಯಾಗ್ರಹ ನಡೆಸಿದರು. ಸತ್ಯಾಗ್ರಹದಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಈ ಹಿಂದೆ ತಮ್ಮ ಸಮಸ್ಯೆಗಳನ್ನು ಬಗೆಹರಿಸಲು ಮನವಿ, ಅರ್ಜಿಗಳನ್ನು ಕೊಟ್ಟು ನಿರಾಶರಾದ ಕಾರ್ಮಿಕರು ಸತ್ಯಾಗ್ರಹದ ಹಾದಿಯನ್ನು ಅನುಸರಿಸಲೇಬೇಕಾಯಿತು. ಕಾರ್ಮಿಕರ ಮುಖ್ಯ ಬೇಡಿಕೆಗಳು (1) ನಿಲ್ಲಿಸಲಾಗಿದ್ದ ಕೆಲಸವನ್ನು ಆರಂಭಮಾಡಿ ಕೂಡಲೇ ಎಲ್ಲಾ ಕಾರ್ಮಿಕರಿಗೆ ಕೆಲಸ ಕೊಡಬೇಕು. (2) ಪ್ಲಾಂಟೇಷನ್ ಕಾರ್ಮಿಕ ಕಾಯಿದೆಯು ಕೊಕ್ಕೋ ಕೆಲಸಗಾರರಿಗೆ ಜಾರಿಯಾಗಬೇಕು. (3) ವೇತನ ಪರಿಷ್ಕರಣವಾಗಬೇಕು. (4) ಅಧಿಕಾರಿಗಳ ಭ್ರಷ್ಟಾಚಾರ ನಿಲ್ಲಬೇಕು. ಇತ್ಯಾದಿ.

ಕಾರ್ಮಿಕರು ಪೂ. 10.30ಕ್ಕೆ ಪುತ್ತೂರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಚೇರಿಯಿಂದ ಘೋಷಣೆ ಹಾಕುತ್ತಾ ಮೆರವಣಿಗೆ ಹೊರಟು ವಿಭಾಗ ಅಧಿಕಾರಿಯವರ ಕಚೇರಿಯ ಮುಂದೆ ಸತ್ಯಾಗ್ರಹ ನಡೆಸಿದರು. ಕಾರ್ಮಿಕರನ್ನುದ್ದೇಶಿಸಿ, ಕಾಂ. ಸೂರ್ಯನಾರಾಯಣ ಭಟ್, ಕಾಂ. ಬಿ. ರಾಮಕೃಷ್ಣ, ಕಾಂ. ವಿಷ್ಣುಮೂರ್ತಿ ಮೊದಲಾದವರು ಮಾತನಾಡಿದರು.

ಕಚೇರಿಯ ಶಿಬ್ಬಂದಿ ವರ್ಗದವರೂ ಕಾರ್ಮಿಕರ ಜತೆ ಮಾತುಕತೆ ನಡೆಸಿ, ತಡೆಹಿಡಿದ ಕೆಲಸವನ್ನು ಪುನಃ ಆರಂಭಿಸುವ ಭರವಸೆ ನೀಡಿದರು. ಮಾತ್ರವಲ್ಲದೆ ಕೊಕ್ಕೋ ವಿಭಾಗ ಕಚೇರಿಗೆ ವಿಭಾಗಾಧಿಕಾರಿಯವರ ನೇಮಕ ಆಗದೆ ಇರುವುದರಿಂದ ಆಗುವ ತೊಂದರೆಗಳನ್ನು ವಿವರಿಸಿದರು. ಸಧ್ಯ ಪುತ್ತೂರು ವಿಭಾಗದ ಉಸ್ತುವಾರಿಯನ್ನು ಹೊನ್ನಾವರದ ಡಿ.ಎಫ್.ಓ. ಅವರು ನೋಡಿಕೊಳ್ಳುತ್ತಿದ್ದಾರೆ. ಆಡಳಿತಕ್ಕೆ ಸಂಬಂಧಿಸಿದ ಕಾಗದಪತ್ರಗಳು ಹೊನ್ನಾವರಕ್ಕೆ ಹೋಗಿಬರಬೇಕು. ಸಕಾಲಕ್ಕೆ ಹಣ ಮಂಜೂರಾತಿಯಾಗದೆ ಕಚೇರಿಯ ನೌಕರರಿಗೂ ಸಂಬಳ ದೊರೆಯಲು ವಿಳಂಬವಾಗಿ ತುಂಬಾ ತೊಂದರೆಯಾಗಿದೆ.

ಸರಕಾರವು ಪುತ್ತೂರು ವಿಭಾಗಕ್ಕೆ ಕೂಡಲೇ ವಿಭಾಗ ಅಧಿಕಾರಿಯವರನ್ನು ನೇಮಕ ಮಾಡಬೇಕು.

ಹಣವನ್ನು ಸಕಾಲಕ್ಕೆ ಮಂಜೂರು ಮಾಡಬೇಕು ಎಂಬ ನಿರ್ಣಯವನ್ನು ಜಾರಿಮಾಡಿ, ಸಿ.ಐ.ಟಿ.ಯು. ಸರಕಾರವನ್ನು ಒತ್ತಾಯಿಸಿತು.

ಕೊನೆಗೆ ಸಂಘದ ಕಾರ್ಯದರ್ಶಿಯವರಾದ ಶಶಿಧರನ್ ಎಲ್ಲರಿಗೂ ವಂದನೆಗಳನ್ನರ್ಪಿಸಿದರು.

ಸಾರ್ವಜನಿಕ ಕ್ಷೇತ್ರ ಕಾರ್ಮಿಕರ ಸಮಾವೇಶ

ದೇಶದಲ್ಲಿನ ಎಲ್ಲಾ ಸಾರ್ವಜನಿಕ ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕರ ಎರಡು ದಿನಗಳ ಸಮಾವೇಶವನ್ನು ಬೆಂಗಳೂರು ನಗರದಲ್ಲಿ ಜುಲೈ 19 ಮತ್ತು 20 ರಂದು ನಡೆಸಲು ಕೇಂದ್ರ ಕಾರ್ಮಿಕ ಸಂಘಟನೆಗಳು ತೀರ್ಮಾನಿಸಿವೆ.

ಏರುತ್ತಿರುವ ಜೀವನ ವೆಚ್ಚಕ್ಕೆ ಸರಿಯಾಗಿ ಡಿ. ಎ. ಕೊಡಲು ಕೇಂದ್ರ ಸರಕಾರವನ್ನು ಈ ಸಮಾವೇಶದಲ್ಲಿ ಒತ್ತಾಯಿಸಲಾಗುವುದು. ಸರಕಾರವು ಕೊಟ್ಟ ಭರವಸೆಯಂತೆ, ಸಾರ್ವಜನಿಕ ಕ್ಷೇತ್ರದಲ್ಲಿ ವೇತನ ಬಗ್ಗೆ ಕೆಲವು ಮಾರ್ಗದರ್ಶನ ನಿಯಮಗಳನ್ನು ಇನ್ನೂ ರೂಪಿಸದಿರುವ ಬಗ್ಗೆ ಕಾರ್ಮಿಕರಲ್ಲಿ ತುಂಬಾ ಅತೃಪ್ತಿಯಿದ್ದು ಈ ಬಗ್ಗೆಯೂ ಚರ್ಚಿಸಲಾಗುವುದು. ವೇತನ ಮಾತುಕತೆಗಳಲ್ಲಿ ಬ್ಯೂರೊ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನ ಮಧ್ಯಪ್ರವೇಶವನ್ನು ವಿರೋಧಿಸುತ್ತಾ ಬಂದಿರುವ ಕಾರ್ಮಿಕರು, ಮುಂದಿನ ಕ್ರಮಗಳ ಬಗ್ಗೆಯೂ ಸಮಾಲೋಚಿಸಲಿರುವರು. ಎರಡು ದಿನಗಳ ಈ ಸಮಾವೇಶಕ್ಕೆ ರಾಷ್ಟ್ರದ ಎಲ್ಲಾ ಕಡೆಗಳಿಂದ ಸುಮಾರು 1500 ಪ್ರತಿನಿಧಿಗಳು ಬರಲಿರುವರು.

○

ಕೇಂದ್ರ ಸಚಿವರಿಗೆ ಕೋಲಾರ ಚಿನ್ನದಗಣಿ ಕಾರ್ಮಿಕರ ಮನವಿ

ಕೋಲಾರದ ಚಿನ್ನದ ಗಣಿಗೆ ಕೇಂದ್ರದ ಉಕ್ಕು ಮತ್ತು ಗಣಿಗಳ ರಾಜ್ಯ ಸಚಿವರಾದ ಶ್ರೀ ಕರಿಯಾಮುಂಡ ಅವರು 30.5.79ರಂದು ಭೇಟಿಯಿತ್ತಿದ್ದರು. ಆಗ ಸಿ.ಐ.ಟಿ.ಯು. ಆಶ್ರಯದ ಮೈಸೂರು ಚಿನ್ನದಗಣಿ ಕಾರ್ಮಿಕರ ಸಂಘವು ವಿವರವಾದ ಮನವಿಯೊಂದನ್ನು ಸಚಿವರಿಗೆ ಅರ್ಪಿಸಿತು. ಮನವಿಯಲ್ಲಿ ಚಿನ್ನದಗಣಿ ಸ್ವಾತಂತ್ರ್ಯ ಪೂರ್ವದ ಆರಂಭದಿಂದ ವಿವರ ಪ್ರಸ್ತಾಪವಿದ್ದು ಈಗ ಕೇಂದ್ರಸರ್ಕಾರವು ಕಂಪನಿಯಿಂದ ಕೊಳ್ಳುತ್ತಿರುವ ಚಿನ್ನದ ದರದ ಬಗ್ಗೆ ವಿಶೇಷ ಕೋರಿಕೆಯನ್ನು ಮಾಡಲಾಗಿದೆ. ಕಂಪೆನಿಯ ಉತ್ಪಾದನೆಯು ಈಗ ನಷ್ಟದಲ್ಲಿದೆ ಎಂಬ ಅಂಶವು ನೈಸರ್ಗಿಕವಲ್ಲವೆಂದೂ, ಕೇಂದ್ರದ ಕೊಳ್ಳುವಿಕೆಯ ದರದ ಮಟ್ಟದಿಂದ ಕಾರ್ಮಿಕರಿಗೆ ಬೋನಸ್‌ನಲ್ಲಿ ಅನ್ಯಾಯವಾಗುತ್ತಿದೆ ಎಂದೂ ಮನವಿಯಲ್ಲಿ ವಿವರಿಸಲಾಗಿದೆ. ಈಗ ಕೇಂದ್ರ ಸರ್ಕಾರವು ಚಿನ್ನದ ಹರಾಜು ನಡೆಸುತ್ತಿರುವುದರಿಂದ ಹರಾಜಿನ ಬೆಲೆಗೆ ತಕ್ಕಂತೆ ಕೊಳ್ಳುವ ದರ ನಿಗದಿ ಮಾಡಿ, ಕಾರ್ಮಿಕರಿಗೆ ಕನಿಷ್ಟ ಬೋನಸ್ ನೀಡಿಕೆಯ ಬಗ್ಗೆ ಸಚಿವರು ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ. ಗಣಿಯಲ್ಲಿ ನಿಮ್ನವರ್ಗದ ಅನೇಕ ಕಾರ್ಮಿಕರಿಗಿರುವ ತೊಂದರೆಗಳ ಬಗ್ಗೆಯೂ ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ.

ಚಿನ್ನದ ಗಣಿಯ ಡಿಪ್ಲೊಮಾ ಪದವೀಧರರು ಮತ್ತು ವಿಜ್ಞಾನ ಪದವೀಧರರು ತಮ್ಮ ತೊಂದರೆಗಳ ಬಗ್ಗೆ ಸಚಿವರಿಗೆ ಪ್ರತ್ಯೇಕ ಮನವಿ ಅರ್ಪಿಸಿದರು. ತಮ್ಮ ಸೇವಾರ್ಹತೆ ಬಡ್ತಿಗಳಲ್ಲಿ ಆಗಿರುವ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಇದರಲ್ಲಿ ಕೋರಲಾಗಿದೆ. ●

ಪ್ರವೇಶಕ್ಕೆ ವಿದ್ಯಾರ್ಥಿಗಳ ಬವಣೆ

ತುಮಕೂರು ಜಿಲ್ಲೆಯ ಪಾವಗಡ ಟೌನಿನಲ್ಲಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ಇದೀಗ 8ನೇ ತರಗತಿಗೆ ಪ್ರವೇಶಗಳನ್ನು ನಿಲ್ಲಿಸಲಾಗಿದೆ. ಆದ್ದರಿಂದ ತಾಲ್ಲೂಕಿನ ಮುಖ್ಯವಾಗಿ ಪಾವಗಡ ಟೌನಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಿಡಿಲು ಬಡಿದಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಲಾಗಿ ಅವಶ್ಯಕವಾಗಿ ಬೇಕಾದ (ಸುಮಾರು 200) ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲಾಗಿದೆ. ಹೆಚ್ಚಿನ ಪ್ರವೇಶ ಕೊಡಲು ನಮಗೆ ತಕ್ಕ ವಸತಿಗೃಹಗಳು ಇಲ್ಲದೆ ಇರುವುದು ಮುಖ್ಯ ತೊಂದರೆಯಾಗಿದೆ ಎಂದು ತಮ್ಮ ನಿಸ್ಸಹಾಯಕತೆಯನ್ನು ವ್ಯಕ್ತಪಡಿಸುತ್ತಾರೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು ಈ ಕಡೆ ಗಮನ ಹರಿಸಿ ಸೂಕ್ತ ಕ್ರಮ ಸಕಾಲದಲ್ಲಿ ಕೈಗೊಂಡು ಬಡವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಲು ಸಹಾಯ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾವಗಡ ಘಟಕ ವಿದ್ಯಾಇಲಾಖೆಯನ್ನು ಒತ್ತಾಯಿಸಿದೆ.

○

ಬೇಡಿಕೆಗಳ ಈಡೇರಿಕೆ

ಕಲ್ಲಿದ್ದಲು ಕಾರ್ಮಿಕರ ಐಕ್ಯಹೋರಾಟದ ಫಲ

ಹೆಚ್ಚಿನ ವೇತನ ಮತ್ತು ಉತ್ತಮ ಸವಲತ್ತುಗಳನ್ನು ಪಡೆಯುವುದಕ್ಕಾಗಿ ಫೆಬ್ರವರಿ 5 ರಂದು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದ ಆರು ಲಕ್ಷ ಕಲ್ಲಿದ್ದಲು ಕಾರ್ಮಿಕರು ಮೇ 18 ರಿಂದ ಅನಿರ್ದಿಷ್ಟ ಮುಷ್ಕರವನ್ನು ಹೂಡಲು ಮುಂದಾಗಿದ್ದರು. ಈ ಹೋರಾಟಕ್ಕೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಒಂದಾಗಿ ಕರೆಯುತ್ತಿದ್ದುವು. ಅನಿರ್ದಿಷ್ಟ ಮುಷ್ಕರಕ್ಕೆ ಭರದಿಂದ ನಡೆದ ಸಿದ್ಧತೆ ಮತ್ತು ಕಾರ್ಮಿಕರ ಅಭೇದ್ಯವಾದ ಒಗ್ಗಟ್ಟನ್ನು ಕಂಡ ಸಿ. ಐ. ಎಲ್. (ಕೋಲ್ ಇಂಡಿಯಾ ಲಿಮಿಟೆಡ್)ನ ಮ್ಯಾನೇಜುಮೆಂಟು ಮಾತುಕತೆಗೆ ಪ್ರಾರಂಭ ಮಾಡಿತು. ಮ್ಯಾನೇಜುಮೆಂಟು ಮತ್ತು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳೊಳಗೆ ಮೇ 16 ರಂದು ಮಾತುಕತೆ ನಡೆದು ಒಪ್ಪಂದವಾದುದರಿಂದ ನಿಯೋಜಿತ ಅನಿರ್ದಿಷ್ಟ ಮುಷ್ಕರವನ್ನು ಹಿಂತೆಗೆಯಲಾಯಿತು. ಪುನರ್ವಿಮರ್ಶೆ ಮಾಡಿದ ಒಪ್ಪಂದವು ಜನವರಿ 1, 1979 ರಿಂದ ನಾಲ್ಕು ವರ್ಷಗಳ ಕಾಲಕ್ಕೆ ಸೀಮಿತವಾಗಿದೆ. ಈ ಒಪ್ಪಂದದ ಪ್ರಕಾರ ಅತೀ ಕೆಳಮಟ್ಟದಲ್ಲಿ ದುಡಿಯುವ ತರಪೇತಾಗದ ಕಾರ್ಮಿಕನಿಗೆ ಮಾಸಕ್ಕೆ ರೂ. 73-90 ರಷ್ಟು ಹೆಚ್ಚಾಗುವುದು. ಇದು 1979 ಜನವರಿ ಒಂದರಿಂದಲೇ ಜಾರಿಗೆ ಬರುವುದು. ಹಾಗೆಯೇ ಹೆಚ್. ಆರ್. ಎ. ಗಣಿಯಲ್ಲಿ ದುಡಿಯುವವರಿಗೆ ವಿಶೇಷ ಅಲೋವೆನ್ಸ್, ಮೊದಲಾದುವುಗಳನ್ನು ಹೆಚ್ಚಿಸಲಾಗಿದೆ.

ಸಿ.ಐ.ಟಿ.ಯು. ರಾಜ್ಯ ಮಂಡಳಿ ಸಭೆ

ಸಿ. ಐ. ಟಿ. ಯು. ನ ಮುಖ್ಯ ಕಾರ್ಯಕರ್ತರ ಸಭೆಯು ದಿನಾಂಕ 17-6-79ರಂದು ನಡೆಯಿತು. ಮೈಸೂರು ಮೈನ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷರಾದ ಕಾಂ. ಕಣ್ಣನ್ ಅವರು ಅಧ್ಯಕ್ಷತೆ ವಹಿಸಿದ್ದ ಈ ಸಭೆಗೆ, ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಅವರು ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ ಅವರು ಆಗಮಿಸಿದ್ದರು.

ಸಿ.ಐ.ಟಿ.ಯು. ರಾಜ್ಯ ಮಂಡಳಿಯ ಸಭೆಯನ್ನು ಜುಲೈ ತಿಂಗಳ 11, 12, 13, 14 ಮತ್ತು 15ರಂದು ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಯಿತು. ಇದಕ್ಕೆಂದು ಕಾರ್ಮಿಕರಿಂದ ಹಾಗೂ ಹಿತೈಷಿಗಳಿಂದ ಕನಿಷ್ಠ 5 ರೂ. ಗಳನ್ನು ಸಂಗ್ರಹಿಸಬೇಕೆಂದು ಗೊತ್ತುಮಾಡಲಾಯಿತು.

ಸಭೆಯನ್ನು ಉದ್ದೇಶಿಸಿ, ಕಾಂ. ಸೂರ್ಯನಾರಾಯಣರಾವ್, ಕಾಂ. ನಂಜುಂಡಪ್ಪ, ಕಾಂ. ಕಣ್ಣನ್, ಟಿ. ಎಸ್. ಮಣಿ, ಸವರಿದಾಸ್ ಮತ್ತು ಅಶ್ವತ್ಥನಾರಾಯಣ ಅವರು ಮಾತನಾಡಿದರು.

○

ಸಿ.ಐ.ಟಿ.ಯು. ಕರ್ನಾಟಕ ರಾಜ್ಯಮಂಡಳಿಯ ಸದಸ್ಯರ ಗಮನಕ್ಕೆ

ಪ್ರಿಯ ಸಂಗಾತಿಗಳೇ,

ಸಿ.ಐ.ಟಿ.ಯು. ಕರ್ನಾಟಕ ರಾಜ್ಯಮಂಡಳಿಯ ಸದಸ್ಯರಿಗೆ ಜುಲೈ 12, 13ರಂದು ಕೆ.ಜಿ.ಎಫ್.ನಲ್ಲಿ ಶಾಲೆ ನಡೆಸಲಾಗುತ್ತದೆ. ಕಾಂ. ಎಂ. ಕೆ. ಪಂಧೆ ಮುಖ್ಯ ಶಿಕ್ಷಕರಾಗಿರುತ್ತಾರೆ.

ಜುಲೈ 14 ಮತ್ತು 15 ರಂದು ಕೆ.ಜಿ.ಎಫ್. ನಲ್ಲಿ ರಾಜ್ಯಸಮಿತಿ ಮತ್ತು ರಾಜ್ಯಮಂಡಳಿಗಳ ಸಭೆಗಳು ನಡೆಯುತ್ತವೆ. 15ರ ಸಂಜೆ ಬೃಹತ್ ಮೆರವಣಿಗೆ ಮತ್ತು ಬಹಿರಂಗಸಭೆ ನಡೆಯುತ್ತವೆ. ಈ ಕಾರ್ಯಕ್ರಮಗಳು ಯಶಸ್ವಿಯಾಗಲು ಅಗತ್ಯವಾದ ವ್ಯವಸ್ಥೆ ಮಾಡಲು ಕೆ.ಜಿ.ಎಫ್.ನ ಸಿ.ಐ.ಟಿ.ಯು. ಕಾರ್ಯಕರ್ತರು ಉತ್ಸಾಹದಿಂದ ದುಡಿಯುತ್ತಿದ್ದಾರೆ.

ಎಲ್ಲಾ ಪದಾಧಿಕಾರಿಗಳೂ, ರಾಜ್ಯಮಂಡಳಿಯ ಸದಸ್ಯರೂ ಜುಲೈ 11ರ ಸಂಜೆಯೇ ಕೆ.ಜಿ.ಎಫ್. ತಲುಪಬೇಕು.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ

ಬೆಂಗಳೂರು.
ತಾ19-6-79

ಪ್ಲೈವುಡ್ ಕಾರ್ಮಿಕರ ಒಂದು ದಿನದ ಮುಷ್ಕರ

ಕನಿಷ್ಠ ಕೂಲಿ ನಿಗದಿ ಮಾಡಬೇಕೆಂದು ಸಿ.ಐ.ಟಿ.ಯು.ವಿಗೆ ಸೇರಿದ ದ. ಕ. ಜಿಲ್ಲಾ ಪ್ಲೈವುಡ್ ಕೆಲಸಗಾರರ ಸಂಘವು ಒತ್ತಾಯಿಸಿದ ನಂತರ ಸರಕಾರವು 1978ರಲ್ಲಿ ರಾಜ್ಯದ ಪ್ಲೈವುಡ್ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿರ್ಣಯಿಸಿ, ಪ್ರಕಟಣೆಯೊಂದನ್ನು ಮೇ ತಿಂಗಳಲ್ಲಿ ಹೊರಡಿಸಿತು. ಈ ಕನಿಷ್ಠ ವೇತನವು 1978 ಜೂನ್ ತಿಂಗಳಿಂದ ಜಾರಿಯಾಗಬೇಕಾಗಿತ್ತು. ಆದರೆ, ಮಾಲಕರು ಹೈಕೋರ್ಟಿಗೆ ರಿಟ್ ಹಾಕಿ ತಡೆಯಾಜ್ಞೆಯ ಮೂಲಕ ಕಾರ್ಮಿಕರಿಗೆ ಸಿಗುವ ಸವಲತ್ತನ್ನು ಸಿಗದಂತೆ ಮಾಡಿದರು.

ಸರಕಾರವು ಮತ್ತು ಮಾಲಕರು ತಡೆಯಾಜ್ಞೆಯನ್ನು ತೆಗೆಸಲು ಮುಂದಾಗಬೇಕೆಂದೂ ಮತ್ತು ಅಂದಿನಿಂದ ಈವರೆಗಿನ ಪರಿಸ್ಥಿತಿಗೆ ತಾತ್ಕಾಲಿಕ ಪರಿಹಾರ ಕೊಡಬೇಕು ಎಂದೂ ಒತ್ತಾಯಿಸಲು ದ. ಕ. ಜಿಲ್ಲಾ ಪ್ಲೈವುಡ್ ಕೆಲಸಗಾರರ ಸಂಘದ ನೇತೃತ್ವದಲ್ಲಿ 26-5-79ರಂದು ಮಂಗಳೂರಿನ ಅಸಿಸ್ಟೆಂಟ್ ಲೇಬರ್ ಕಮಿಷನರವರ ಕಚೇರಿಯ ಎದುರು ಸತ್ಯಾಗ್ರಹ ನಡೆಸಲಾಗಿತ್ತು. ಮಾಲಕರು ಮತ್ತು ಸರಕಾರ ಮತ್ತೂ ಸುಮ್ಮಗಿದ್ದುದರಿಂದ ದಿನಾಂಕ 14-6-1979 ರಂದು ನೆಟ್ಟಣ ಮತ್ತು ಹಂಗಾರಕಟ್ಟೆಯಲ್ಲಿ ಒಂದು ದಿನದ ಮುಷ್ಕರವನ್ನು ನಡೆಸಲಾಗಿದೆ. ಮಾಲಕರು ಮುಷ್ಕರವನ್ನು ಮುರಿಯಲು ಪ್ರಯತ್ನಪಟ್ಟರೂ ಸಫಲರಾಗಲಿಲ್ಲ. ಕಾರ್ಮಿಕರು ಬೆಳಿಗ್ಗಿನಿಂದ ಸಂಜೆಯವರೆಗೆ ಕಾರ್ಖಾನೆಯ ಗೇಟಿನ ಎದುರು ನಿಂತು ಘೋಷಣೆಗಳನ್ನು ಕೂಗಿದರು. ಬೇಡಿಕೆ ಈಡೇರದಿದ್ದಲ್ಲಿ ಹೋರಾಟವನ್ನು ಮುಂದೆ ತೀವ್ರಗೊಳಿಸುವಂತೆ ಈಗಾಗಲೇ ಕಾರ್ಯಕಾರಿ ಸಮಿತಿಯು ನಿರ್ಧಾರ ಕೈಗೊಂಡಿರುತ್ತದೆ. ●

ಪೋಲೀಸ್ ದೌರ್ಜನ್ಯವನ್ನು ಖಂಡಿಸಿ.......

[ಒಂದನೇ ಪುಟದಿಂದ]

ಅರಣ್ಯ ಭೂಮಿಯಲ್ಲಿ ಉಳುಮೆ ಮಾಡುತ್ತಾ ಬಂದಿರುವ ಬಡ ಜನರಿಗೆ ಭೂಮಿಯನ್ನು ಖಾಯಂಗೊಳಿಸಬೇಕು; ಕೃಷಿಯೋಗ್ಯ ಸರಕಾರಿ ಅರಣ್ಯ ಭೂಮಿಯನ್ನು ಭೂರಹಿತ ಬಡಜನರಿಗೆ ಹಂಚಬೇಕು ಎಂಬ ಬೇಡಿಕೆಗಳು ಮನವಿಯಲ್ಲಿ ಸೇರಿದ್ದವು. ಮುಖ್ಯಮಂತ್ರಿಯವರ ಕಾರ್ಯದರ್ಶಿ ಶ್ರೀ ಲಿನ್ ಅವರು ಬೇಡಿಕೆಗಳನ್ನು ಪರಿಶೀಲಿಸಿ, ಮೃತರ ಕುಟುಂಬಕ್ಕೆ ಪರಿಹಾರ ಕೊಡಲು ಕೂಡಲೇ ಏರ್ಪಾಡು ಮಾಡುವುದಾಗಿಯೂ, ಪೋಲೀಸ್ ಗೋಲಿಬಾರಿನ ಬಗ್ಗೆ ಮೆಜಿಸ್ಟೇರಿಯಲ್ ತನಿಖೆ ನಡೆಸುವುದಾಗಿಯೂ, ಉಳಿದ ಬೇಡಿಕೆಗಳನ್ನು ಪರಿಶೀಲಿಸಲಾಗುವುದೆಂದೂ ಹೇಳಿದರು. ಭೂಮಿ ವಿತರಣೆ ಬಗ್ಗೆ ಸ್ಥಳೀಯವಾಗಿ ಬೇಕಾದ ಕ್ರಮ ತೆಗೆದುಕೊಳ್ಳಬೇಕಷ್ಟೆ ಎಂದರು.

ಗೋಪಾಲಗೌಡ ಚೌಕದಲ್ಲಿ ಸೇರಿದ ಸಭೆಯನ್ನು ಉದ್ದೇಶಿಸಿ ಕಾಂ. ಸೂರ್ಯನಾರಾಯಣರಾವ್, ಕಾಂ. ಎಚ್. ಮುಗವಾಳಪ್ಪ, ಕಾಂ. ವಿ. ಜೆ. ಕೆ. ನಾಯರ್, ಕಾಂ. ಟಿ. ಎಸ್. ಅನಂತರಾವ್ ಮತ್ತು ಕಾಂ. ಸುಬ್ರಮಣಿಯವರು ಮಾತನಾಡಿದರು. ಪೋಲೀಸರ ದೌರ್ಜನ್ಯದ ಬಗ್ಗೆ ತನಿಖೆ ನಡೆದು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳದಿದ್ದಲ್ಲಿ ರಾಜ್ಯದಾದ್ಯಂತ ಚಳುವಳಿ ನಡೆಸಬೇಕಾಗುವುದೆಂದು ಭಾಷಣಕಾರರು ಸರಕಾರಕ್ಕೆ ಎಚ್ಚರಿಕೆ ನೀಡಿದರು. ●

ಸಂಪಾದಕೀಯ

[ಒಂದನೇ ಪುಟದಿಂದ]

ಇನ್ನೂ ಸಿಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸವಲತ್ತು ಅಪರೂಪ. ಸರಕಾರವು ಜನಸಾಮಾನ್ಯರಿಗೆ ವೈದ್ಯಕೀಯ ಸವಲತ್ತುಗಳನ್ನು ಒದಗಿಸುವುದಕ್ಕೆ ಆದ್ಯತೆ ಇತ್ತಲ್ಲಿ, ರಾಜ್ಯಕ್ಕೆ ಈಗ ನಿರುದ್ಯೋಗದಲ್ಲಿರುವ 5,000 ವೈದ್ಯರುಗಳಲ್ಲ, ಇನ್ನೂ 5,000 ಇದ್ದರೂ ಸಾಲದು! ಇನ್ನು ಜನಸಾಮಾನ್ಯರಿಗೆ ಉಪಯೋಗವಾಗುವಂತೆ ಆಗುವ ದೃಷ್ಟಿಯಿಂದ ಸರಿಯಾಗಿ ತರಪೇತು ಹೊಂದಿದ ಪಾದಚಾರಿ ವೈದ್ಯರುಗಳು (ಚೈನಾದೇಶದಲ್ಲಿನಂತೆ) ಇದ್ದರೆ ಉತ್ತಮ. ಆದರೆ ಈಗ ಯಾರು ಯಾರೋ ವೈದ್ಯರ ಬೋರ್ಡು ತೂಗುಹಾಕಿ, ಹಣ ಸಂಪಾದಿಸುವುದು ರೂಢಿಯಾಗಿದೆ.

ಅದೇನಿದ್ದರೂ ವೈದ್ಯಕೀಯ ವಿದ್ಯಾರ್ಥಿಗಳೂ, ವೈದ್ಯರುಗಳೂ ತಾವು ಸಮಾಜದ ಒಂದು ಅಂಗವೆಂದು ತಿಳಿದುಕೊಂಡು, ಇತರ ಜನವಿಭಾಗದೊಂದಿಗೆ ಸೌಹಾರ್ದ ಸಂಬಂಧವನ್ನು ಬೆಳೆಸಿ ಹೋರಾಡಿದರೇನೆ ಜಯಗಳಿಸುವುದು ಸಾಧ್ಯ. ●

.......ಸಿ. ಐ. ಟಿ. ಯು. ವಿನ ಕರೆ

[2ನೇ ಪುಟದಿಂದ]

ಕಾಂ. ರಾಮಮೂರ್ತಿಯವರು ಬರೆದ ಪತ್ರದಲ್ಲಿನ ವಿವರ ಹೀಗಿದೆ.

"ಕಾರ್ಮಿಕ ವರ್ಗದ ಐಕ್ಯತೆ ಮತ್ತು ಐಕ್ಯಹೋರಾಟ ಕಾರ್ಯಾಚರಣೆಗಳಿಗೆ ಬಹಳ ಪ್ರಾಧಾನ್ಯ ಹಾಗು ಆದ್ಯತೆಗಳು ಬಂದಿರುತ್ತುದರಿಂದ, ಮದ್ರಾಸಿನಲ್ಲಿ ಜರುಗಿದ ಸಿ.ಐ.ಟಿ.ಯು.ವಿನ ನಾಲ್ಕನೆ ಅಧಿವೇಶನದಲ್ಲಿ ಇದಕ್ಕೆ ಸಾಕಷ್ಟು ಗಮನವಿತ್ತಿರುವೆವು. ಎಲ್ಲಾ ವಿಭಾಗಗಳನ್ನೂ ಆವರಿಸಿ ಇತ್ತೀಚಿಗಿನ ದಿನಗಳಲ್ಲಿ ನಡೆದಂತಹ ಕಾರ್ಮಿಕರ ಐಕ್ಯ ಚಳುವಳಿ, ಇದರಲ್ಲೂ ಮುಖ್ಯವಾಗಿ ಕೈಗಾರಿಕಾ ಸಂಬಂಧ ಮಸೂದೆಯನ್ನು ವಿರೋಧಿಸಿ ನಡೆದ ಐಕ್ಯಕಾರ್ಯಾಚರಣೆಗಳ ಹಿನ್ನೆಲೆಯಲ್ಲಿ ಸಂಯುಕ್ತ ಚಳುವಳಿಯನ್ನು ಬಲಪಡಿಸಿ, ವಿಶಾಲಗೊಳಿಸುವ ದೃಷ್ಟಿಯಿಂದ ಪರಸ್ಪರ ವಿಮರ್ಶೆ ಮತ್ತು ಸಲಹೆಗಳನ್ನು ಕೊಡಲು ಅನುಕೂಲವಾಗಲು ಒಂದು ಸಂಘಟನೆಯನ್ನು ರೂಪಿಸುವತ್ತ ನಾವೆಲ್ಲಾ ಆಲೋಚಿಸುತ್ತಲಿದ್ದೇವೆ. ಎಲ್ಲಾ ಕೇಂದ್ರ (ರಾಷ್ಟ್ರೀಯ) ಕಾರ್ಮಿಕ ಸಂಘಟನೆಗಳ ಮತ್ತು ಉದ್ಯಮವಾರು ಫೆಡರೇಷನುಗಳ ಒಂದು ಕೊನ್‌ಫೆಡರೇಷನ್ ರಚಿಸುವುದರ ಬಗ್ಗೆ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಬಿ. ಟಿ. ರಣದಿವೆ ಅವರು ನಾಲ್ಕನೆ ಅಧಿವೇಶನದಲ್ಲಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ಸೂಚಿಸಿದ್ದರು. ಯ ಸಿ.ಟಿ.ಯು.ವಿನ ರೂಪದಲ್ಲಿ ಎಲ್ಲಾ ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಮತ್ತು ಫೆಡರೇಷನುಗಳ ಒಂದು ವಿಶಾಲ ಸಂಘಟನೆಯನ್ನು ರಚಿಸುವ ಬಗ್ಗೆ ನಾಲ್ಕನೆ ಸಮ್ಮೇಳನದಲ್ಲಿ ಅಂಗೀಕರಿಸಲಾದ "ಕಾರ್ಮಿಕವರ್ಗದ ಐಕ್ಯಕಾರ್ಯಾಚರಣೆ" ಎಂಬ ನಿರ್ಣಯದಲ್ಲಿ ಹೇಳಿರುವೆವು. ಈ ನಿರ್ಣಯದ ಪ್ರತಿಯನ್ನು ನಿಮ್ಮ ಅವಗಾಹನೆಗಾಗಿ ಲಗ್ತೀಕರಿಸಲಾಗಿದೆ.

ಕಾರ್ಮಿಕ ವರ್ಗದ ಐಕ್ಯತೆ ಮತ್ತು ಐಕ್ಯಕಾರ್ಯಾಚರಣೆಯ ಬಗ್ಗೆ ನಮಗಿರುವ ಕಾಳಜಿಯಲ್ಲಿ ನೀವೂ ಪಾಲುದಾರರಾಗುವಿರೆಂದು ನಾವು ನಂಬುವೆವು.

ಎಲ್ಲಾ ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಮತ್ತು ಉದ್ಯಮಗಳ ಫೆಡರೇಷನುಗಳ ಒಂದು ಕೊನ್‌ಫೆಡರೇಷನ್ ರಚಿಸುವುದರ ಬಗ್ಗೆ ಮುಂದಿಟ್ಟಿರುವ ನಮ್ಮ ಸೂಚನೆ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಲು ಕೇಳಿಕೊಳ್ಳುತ್ತೇವೆ". ○

ಆಲಿಪ್ತ ರಾಜ್ಯಗಳ....

[ಒಂದನೇ ಪುಟದಿಂದ]

ಖಂಡಿಸಿ, ಅರಬ್ ಜನತೆ ಮತ್ತು ಪೇಲಿಸ್ತೀನ್ ವಿಮೋಚನಾ ಸಂಘಟನೆಗೆ ಸಂಪೂರ್ಣ ಬೆಂಬಲ ಕೊಡುವ ದಿಟ್ಟ ನಿಲುವನ್ನು ತಳೆಯಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಒತ್ತಾಯಿಸುತ್ತದೆ.

ಪಾಲಿಟ್ ಬ್ಯೂರೊದ ದೃಷ್ಟಿಯಲ್ಲಿ ಪಾಕಿಸ್ತಾನವನ್ನು ಆಲಿಪ್ತ ರಾಷ್ಟ್ರಗಳ ಸಮೂಹಕ್ಕೆ ಸೇರಿಸುವುದರಿಂದ ಮಿಲಿಟರಿ ಸಂಬಂಧಗಳಲ್ಲಿ ಸಿಕ್ಕಿಹಾಕಿಕೊಂಡ ಮತ್ತು ತನ್ನ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಹತ್ತಿಕ್ಕುವ ಒಂದು ರಾಷ್ಟ್ರಕ್ಕೆ ಉತ್ತಮ ಪ್ರಮಾಣಪತ್ರವನ್ನಿತ್ತಂತಾಗುತ್ತದೆ. ಇದು ಆಲಿಪ್ತ ರಾಷ್ಟ್ರಗಳ ಚಳುವಳಿಯ ನಿಯಮ ಮತ್ತು ಮೌಲ್ಯಗಳಿಗೆ ವಿರೋಧವಾಗಿದೆ. ●

ಕರ್ನಾಟಕ ರಾಜಕೀಯ ಬೆಳವಣಿಗೆ ಬಗ್ಗೆ ಕಾಂ. ಪಿ. ರಾಮಮೂರ್ತಿ

ಸರ್ವಾಧಿಕಾರ ಮತ್ತು ಕೋಮುವಿರೋಧಿ ಶಕ್ತಿಯ ಬೆಳವಣಿಗೆಗೆ ಕರ್ನಾಟಕ ರಾಜ್ಯದಲ್ಲಿನ ಸಧ್ಯದ ರಾಜಕೀಯ ವಿದ್ಯಮಾನಗಳು ಸಹಕಾರಿಯಾಗಬಲ್ಲದು ಎಂಬುದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಸದಸ್ಯ ಕಾಂ. ಪಿ. ರಾಮಮೂರ್ತಿಯವರು ಹೇಳಿರುವರು. 20-6-79 ರಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಕಾಂ. ರಾಮಮೂರ್ತಿಯವರು, ಕಾಂಗ್ರೆಸ್ (ಐ) ವರ್ಕಿಂಗ್ ಕಮಿಟಿಯು ದೇವರಾಜ ಅರಸು ಅವರ ಮುಖಂಡತ್ವದ ಕೆ. ಪಿ. ಸಿ. ಸಿ. (ಐ) ಯನ್ನು ವಿಸರ್ಜಿಸಿದ್ದರ ಬಗ್ಗೆ ಮತ್ತು ಪರಿಣಾಮವಾಗಿ ಉದ್ಭವಿಸಿದ ರಾಜಕೀಯ ಬೆಳವಣಿಗೆ ಬಗ್ಗೆ ಸುದ್ದಿಗಾರರು ಕೇಳಿದಾಗ ಹೀಗೆಂದರು.

ನಮ್ಮ ಪಕ್ಷವು ದೇವರಾಜ ಅರಸು ಅವರ ನಿಲುಮೆಯನ್ನು ಸ್ವಾಗತಿಸಿದೆ ಎಂದರು. ಇಂದಿರಾಗಾಂಧಿಯ ಸರ್ವಾಧಿಕಾರ ಮತ್ತು ನಿರಂಕುಶಾಧಿಕಾರ ಆಕಾಂಕ್ಷೆಗಳು ಮತ್ತು ತನ್ನ ಮತ್ತು ತನ್ನ ಮಗನ ಬಗ್ಗೆ ಟೀಕೆಯನ್ನು ಸಹಿಸದಿರುವುದರ ಬಗ್ಗೆ ಬೇಗನೆ ಉಳಿದ ಕಾಂಗ್ರೆಸ್ (ಐ) ನವರೆಲ್ಲರೂ ತಿಳಿಯುವರು ಎಂದರು.

ಸಧ್ಯದ ರಾಜಕೀಯ ಪರಿಸ್ಥಿತಿಯು ಉತ್ತಮ ಬೆಳವಣಿಗೆಯಾದರೂ, ಮುಂದೆ ರಾಷ್ಟ್ರೀಯ ಬದಲಿಯೊಂದು ಹೇಗೆ ಬೆಳೆಯಬಹುದು ಎನ್ನುವುದರ ಬಗ್ಗೆ ಈಗಲೇ ಹೇಳುವುದು ಸುಲಭವಲ್ಲ ಎಂದರು. ○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಪರಿಸರ

ಇಂದಿರಾಗಾಂಧಿಯವರನ್ನು ಯಾರ್‍ಯಾರು ಭೇಟಿ ಮಾಡುತ್ತಾರೆ ಎಂಬ ಗುಟ್ಟಾದ ವರದಿಯನ್ನು ಸಲ್ಲಿಸಲು ದೇವರಾಜ ಅರಸರು ಕರ್ನಾಟಕ ಸರ್ಕಾರದ ಪೋಲೀಸರನ್ನು ನೇಮಿಸಿಕೊಂಡಿರುವುದನ್ನು ನಾನು ಸಹಿಸಲಾರೆ.

(ಕಾಂಗ್ರೆಸ್ ರಾಜ್ಯಸಭಾ ಸದಸ್ಯ)
—ಎಫ್. ಎಂ. ಖಾನ್

ಬಹಿರಂಗಸಭೆಗಳಲ್ಲಿ ಗಾಂಭೀರ್ಯವಿರುವುದಿಲ್ಲ. ಇಲ್ಲಿ ನಡೆಯುವುದು ಬರೀ ತೇಜೋವಧೆಯ ಭಾಷಣಗಳು ಮಾತ್ರ. ಇವು ಎಳೆಯರ ಮನಸ್ಸುಗಳನ್ನು ಕೆಡಿಸುತ್ತವೆ. ಮಕ್ಕಳನ್ನು ಸಾರ್ವಜನಿಕ ಸಭೆಗಳಿಗೆ ಕಳುಹಿಸಬೇಡಿ.

(ಉಪಚುನಾವಣಾ ಪ್ರಚಾರ ಭಾಷಣ ಮಾಡುತ್ತಾ
ತಮಿಳುನಾಡು ಮುಖ್ಯಮಂತ್ರಿ
—ಎಂ. ಜಿ. ರಾಮಚಂದ್ರನ್

ಡಾ॥ ಎಂ. ಡಿ. ನಟರಾಜ್ (ದೇವರಾಜ ಅರಸು ಅವರ ಅಳಿಯ) ಎನ್ನುವ ವ್ಯಕ್ತಿ ಯಾರೆಂಬುದೇ ನಮಗೆ ತಿಳಿದಿಲ್ಲ. ಆತನ ಮುಖದರ್ಶನವನ್ನೂ ನಾವು ಮಾಡಿಲ್ಲ. ಆತ ನಮ್ಮ ವಿವಾದದ ಬಗ್ಗೆ ಮಾಲೀಕರೊಡನೆ ಸಂಧಾನ ನಡೆಸುತ್ತಾನಂತೆ!

—ತಮ್ಮ ನ್ಯಾಯಬದ್ಧ ಬೇಡಿಕೆಗಳ ಈಡೇರಿಕೆಗೆ
ಮುಷ್ಕರನಿರತನಾಗಿರುವ ಡಬ್ಲ್ಯು. ಎಸ್. ಇನ್ಸುಲೇಟರ್‌ನ
—ಓರ್ವ ಕಾರ್ಮಿಕ

ಇಂದಿರಾಗಾಂಧಿಯ ಸರ್ವಾಧಿಕಾರದ ವಿರುದ್ಧ ಸಮರ ಆರಂಭಿಸಿರುವ ದೇವರಾಜ ಅರಸು ಅವರಿಗೆ ದೇಶದ ನೂರಾರು ಕಡೆಯಿಂದ ಅಭಿನಂದನೆಗಳು ಬರುತ್ತಿವೆ. ಟೆಲಿಫೋನ್ ಕರೆಗಳು ಬರುತ್ತಿವೆ. ಇಡೀ ದೇಶಕ್ಕೆ ಹೊಸ ನಾಯಕತ್ವ ಕೊಡಲು ಅನೇಕರು ಅವರತ್ತ ನೋಡುತ್ತಿದ್ದಾರೆ.

—ಭಾರತದ ಪ್ರಮುಖ ಪತ್ರಿಕೆಗಳಲ್ಲಿ ವರದಿಯಾದ ಒಂದು ಪ್ರಧಾನ ಸುದ್ದಿ

ಬಂಗಾರಪ್ಪ ಒಬ್ಬ ದೊಡ್ಡ ಅವಕಾಶವಾದಿ. ತನ್ನ ಮಂತ್ರಿ ಸ್ಥಾನದ ಮೂರುವರ್ಷದ ಅವಧಿಯೊಳಗೆ ಕೋಟ್ಯಾಂತರ ರೂಪಾಯಿ ಮಾಡಿಕೊಂಡಿದ್ದಾನೆ. ಆತನನ್ನು ರಾಜಕೀಯದಿಂದಲೇ ದೂರ ಓಡಿಸುವವರೆಗೆ ನಾನು ವಿಶ್ರಮಿಸುವುದಿಲ್ಲ.

ಕಾನೂನು ಸಚಿವ
—ಎಸ್. ಜಿ. ಹಾವನೂರು

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154